ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 30 | ಜುಲೈ 24, 1983 | ಬೆಲೆ 60 ಪೈಸೆ

ವಿಜಯನಗರ ಉಕ್ಕಿನ ಕಾರ್ಖಾನೆ :

ಕರ್ನಾಟಕ ಜನತೆಗೆ ದ್ರೋಹ

ಇಡೀ ದೇಶದ ಹಾಗೆಯೇ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿರುವ ಹಲವು ಯೋಜನೆಗಳಲ್ಲೊಂದಾಗಿರುವ ವಿಜಯ ನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆಯ ಮಹಾಕಾರ್ಯವನ್ನು ಮಹಾನಾಯಕಿ ಇಂದಿರಾ ಗಾಂಧಿಯವರು ಕೈಬಿಟ್ಟಿದ್ದಾರೆ. 1971ರಲ್ಲಿ ಚುನಾವಣೆಯ ಕೆಲವು ದಿವಸಗಳ ಮುಂಚೆ ತಾವೇ ಅಡಿಗಲ್ಲು ಹಾಕಿದ್ದನ್ನು 1983 ಜುಲೈ ಹದಿನೈದರಂದು ಕಿತ್ತೊಗೆದರು. ಜುಲೈ 15ರಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಈ ಪ್ರಶ್ನೆಯನ್ನೆತ್ತಿದಾಗ "ರಾಷ್ಟ್ರ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿದೆ. ಜನತಾ ಆಳ್ವಿಕೆಯಲ್ಲಿ ಎಲ್ಲಾ ಹಾಳುಕೆಡವಿದ್ದನ್ನು ಇನ್ನೂ ರಿಪೇರಿ ಮಾಡಲಾಗುತ್ತಿದೆ. ವಿದ್ಯುತ್ ಕೊರತೆಇದೆ. ಅಭಾವ ನೆರೆಹಾವಳಿಯಿದೆ. ಇದಕ್ಕೆಲ್ಲ ಮೊದಲು ಗಮನ, ಅನಂತರ ವಿಜಯನಗರ ಉಕ್ಕು ಕಾರ್ಖಾನೆಯ ವಿಷಯ"ಎಂದು ಖಡಾಖಂಡಿತವಾಗಿಯೇ ಹೇಳಿಬಿಟ್ಟಿದ್ದಾರೆ.

ಚುನಾವಣೆ ಬಂದಾಗಲೆಲ್ಲ ಮತದಾರರನ್ನು ಆಕರ್ಷಿಸುವ ಸಲುವಾಗಿ ಕರ್ನಾಟಕದ ಅಭಿವೃದ್ಧಿಯ ಕುರಿತು ತಮಗೂ ಕಾಳಜಿ ಇದೆಂಬುದಕ್ಕೆ ಸಾಕ್ಷಿಯಾಗಿ ಕಾಂಗ್ರೆಸ್ ಮುಖಂಡರೆಲ್ಲ "ವಿಜಯನಗರ ಉಕ್ಕಿನ ಕಾರ್ಖಾನೆ ಆಗಿಯೇ ತೀರುತ್ತದೆ" "ಅದರ ಸಲುವಾಗಿಯೇ 1982ರಂದು ವಿಧಾನ ಸಭೆಗೆ ಚುನಾವಣೆ ಸಾರಿದಾಗ ಪ್ರತ್ಯೇಕ ಪ್ರಾಧಿಕಾರವನ್ನು ನೇಮಿಸಲಾಗಿದೆ" ಎಂದೆಲ್ಲ ಕೂಗುತ್ತಿದ್ದ ಘೋಷಣೆಗಳೆಲ್ಲ ಅರಬ್ಬಿ ಸಮುದ್ರದ ತೆರೆಯ ಘರ್ಷಣೆಯಲ್ಲಿ ಅಡಗಿ ಹೋದಂತಾಯಿತು.

ಯಾವುದೇ ದೇಶ ಸದೃಢವಾಗಿ, ಸ್ವಾವಲಂಬಿಯಾಗಿ, ಬೆಳೆಯಬೇಕಾದರೆ ಮೂಲ ಕೈಗಾರಿಕೆಗಳಂಥ ಉಕ್ಕಿನ ಕಾರ್ಖಾನೆಗಳು ತಲೆ ಎತ್ತುವುದು ಅತ್ಯಗತ್ಯ. ಯಂತ್ರಗಳನ್ನು ತಯಾರಿಸುವಂಥ ದೊಡ್ಡ ಯಂತ್ರಗಳು ಇದ್ದರೇನೇ ಒಂದು ದೇಶ ತನ್ನ ಬೆಳವಣಿಗೆಗಾಗಿ ಪರಾವಲಂಬಿಯಾಗುವುದನ್ನು ಕಡಿಮೆ ಮಾಡಬಹುದು. ಆ ದೃಷ್ಟಿಯಿಂದಲೇ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಅಮೇರಿಕ ಸಾಮ್ರಾಜ್ಯಶಾಹಿ ಸರಕಾರ ಕುಂಟುನೆಪ ಮುಂದೆ ಮಾಡಿ ಭಾರತ ದೇಶದಲ್ಲಿ ಭಾರವಾದ ದೊಡ್ಡ ಉಕ್ಕು ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಸಹಾಯಮಾಡಲು ಮುಂದೆ ಬಾರದಿದ್ದಾಗ, ದಿ. ನೆಹರೂರವರು ಸೋವಿಯತ್ ದೇಶದ ಸಹಾಯದಿಂದ ಭಿಲಾಯಿ ಉಕ್ಕಿನ ಕಾರ್ಖಾನೆ ಸ್ಥಾಪಿಸಬೇಕಾಯಿತು. ಅನಂತರ ದುರ್ಗಾಪುರ. ರೂರ್ಕೆಲಾಗಳಲ್ಲೂ ಉಕ್ಕಿನ ಕಾರ್ಖಾನೆಗಳು ರಚಿತವಾದವು.

ರಶ್ಯಾದೇಶದಲ್ಲಿ ಕ್ರಾಂತಿಯಾದ ಕೂಡಲೇ, ಭಾರವಾದ ದೊಡ್ಡ ಕೈಗಾರಿಕೆಗಳಿಗೂ, ಒಕ್ಕಲತನಕ್ಕೂ ಪ್ರಾಧಾನ್ಯತೆ ನೀಡಲಾಯಿತು. ತಮ್ಮ ದೇಶದ ಬೆಳವಣಿಗೆಗಾಗಿ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ದೇಶಗಳ ಮೇಲೆ ಅವಲಂಬಿಸುವುದನ್ನು ತಪ್ಪಿಸುವುದೇ ಈ ರೀತಿ ಮಾಡಲು ಲೆನಿನ್ನರು ಉದ್ದೇಶಿಸಿದ್ದರು. ಇವುಗಳಿಲ್ಲದೆ ಹಿಂದುಳಿವಿಕೆಯನ್ನು ದೂರ ಮಾಡಲು ಸಾಧ್ಯವಿಲ್ಲೆಂದೂ ನಮ್ಮ ಹಿತೈಷಿಗಳಲ್ಲದ ಮುಂದುವರಿದ ರಾಷ್ಟ್ರಗಳು ಇಂಥಹ ಮೂಲಭೂತ ಕೈಗಾರಿಕೆಗಳ ಬೆಳವಣಿಗೆಗೆ ಎಂದೂ ಸಹಾಯ, ಪ್ರೋತ್ಸಾಹ ನೀಡುವುದಿಲ್ಲೆಂದೂ ಲೆನಿನ್ನರಿಗೆ ಗೊತ್ತಿತ್ತು. ಇದನ್ನು ತಿಳಿದೇ ದಿ॥ ನೆಹರೂರವರು ರಶ್ಯಾ ಮತ್ತಿನ್ನಿತರ ಸಮತಾವಾದಿ ದೇಶಗಳ ಸಹಾಯದಿಂದಲೇ ಉಕ್ಕು ಕಾರ್ಖಾನೆ, ಪೆಟ್ರೋಲಿಯಂ, ಅಡಿಗೆ ಗ್ಯಾಸ್ ಸಂಶೋಧನೆ, ಔಷಧಗಳ ಕಾರ್ಖಾನೆಗಳನ್ನು ಸ್ಥಾಪಿಸುವ ನಿರ್ಧಾರ ಕೈಕೊಂಡಿದ್ದರು. ಆದರೂ ಪಾಶ್ಚಿಮಾತ್ಯ ದೇಶಗಳೊಡನೆಯ ಅವಲಂಬನೆಯನ್ನು ಮಾತ್ರ ಅವರು ಬಿಟ್ಟುಕೊಟ್ಟಿರಲಿಲ್ಲ.

ನಮ್ಮ ದೇಶ ಭದ್ರವಾಗಿ ಉಳಿಯಬೇಕಾದರೆ ಮೆಶಿನರಿಗಳನ್ನು ತಯಾರಿಸುವಂಥ ಮೆಶಿನರಿಗಳು ಬೇಕೇಬೇಕು. ಅದಕ್ಕೆ ಬೇಕಾದಂಥ ಕಚ್ಚಾ ಮಾಲು, ನಮ್ಮ ದೇಶದಲ್ಲಿ ಸಾಕಷ್ಟಿದೆ. ಆದರೆ ಆ ಕಚ್ಚಾ ಮಾಲು ವಿದೇಶಗಳಿಗೆ ರವಾನಿಸಲ್ಪಡುತ್ತಿದೆ. ದೇಶದ ಅಭಿವೃದ್ಧಿಯ ಕಡೆ ಗಮನವಿಟ್ಟು ಆಳುವ ಪಕ್ಷ, ಇಂಥಹ ಕಚ್ಚಾ ಮಾಲುಗಳನ್ನು ಇಲ್ಲಿಯೇ ಉಪಯೋಗಿಸಿಕೊಳ್ಳಲಿಕ್ಕೆ ಬೇಕಾದ ವ್ಯವಸ್ಥೆಗೆ ಆದ್ಯತೆ ನೀಡುವುದು ಅತ್ಯಗತ್ಯ. ಬಂಡವಾಳಶಾಹಿ ರಾಷ್ಟ್ರಗಳನ್ನು ಅಸಮಾಧಾನಗೊಳಿಸುವುದು ತರವಲ್ಲ ಎಂದು ತಿಳಿದ ಇಂದಿರಾ ಗಾಂಧಿ ಉಕ್ಕು ಮುಂತಾದ ಕೈಗಾರಿಕೆಗಳಿಗೆ ಆದ್ಯತೆ ನೀಡಲು ಮುಂದೆ ಬರುತ್ತಿಲ್ಲ. ಇದು ಅಪಾಯಕಾರಿ ಧೋರಣೆ.

ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೈಬಿಡಲು ಇಂದಿರಾಗಾಂಧಿಯವರು ಕ್ಷುಲ್ಲಕ, ಅಸಮರ್ಪಕ, ನಗೆಗೀಡು ಮಾಡುವ ಕಾರಣಗಳನ್ನು ತೋರಿಸಿದ್ದಾರೆ

ದೇಶ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿದೆಂಬುದು ಮೊದಲನೆಯವಾದ. 1970–71 ರಲ್ಲೂ ದೇಶ ಭೀಕರ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿತ್ತು. ಬರಗಾಲವಂತೂ ಅತಿ ಗಂಭೀರ ಸ್ವರೂಪ ತಾಳಿತ್ತು. ಉತ್ಪಾದನೆ

(8ನೇ ಪುಟ ನೋಡಿ)

26-7-83 ರಂದು ಕಾರ್ಮಿಕರ ಬೇಡಿಕೆ ದಿನಾಚರಣೆಯನ್ನು ಯಶಸ್ವಿಗೊಳಿಸಿ

ಬಿಜೆಪಿಯಲ್ಲಿ ಒಡಕು

–ಸಿ. ರಾಮಚಂದ್ರರಾವ್

ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಏಕೆ, ಸ್ವಲ್ಪ ಮಟ್ಟಿಗಾದರೂ ದೇಶದ ರಾಜಕೀಯದಲ್ಲಿ ಶ್ರೀಮಾನ್ ಎ. ಕೆ. ಸುಬ್ಬಯ್ಯನವರನ್ನು ಭಾರತೀಯ ಜನತಾ ಪಕ್ಷದಿಂದ ಹೊರ ಹಾಕಿದ ಘಟನೆ ಮಹತ್ವವುಳ್ಳದ್ದಾಗಿದೆ ಎಂಬುದರಲ್ಲಿ ಎರಡು ಮಾತು ಇರಲಾರದು. ಕರ್ನಾಟಕ ರಾಜ್ಯದ ಭಾರತೀಯ ಜನತಾ ಪಕ್ಷದ ಮಾಜಿ ಮತ್ತು ಬಹು ಕಾಲದ ಅಧ್ಯಕ್ಷರು, ವಿಧಾನ ಪರಿಷತ್ತಿನಲ್ಲಿ ದೀರ್ಘ ಕಾಲವಿದ್ದು ಹತ್ತು ಹಲವು ಪ್ರಶ್ನೆಗಳಲ್ಲಿ ಆಗಿನ ಮತ್ತು ಈಗಿನ ಮಂತ್ರಿಮಂಡಲಗಳನ್ನು 'ಅಲುಗಿಸಿ' ದವರು ತಾನೆ ಎ. ಕೆ. ಸುಬ್ಬಯ್ಯನವರು ? ಆದ್ದರಿಂದ ಅವರನ್ನು ಅವರ ಪಕ್ಷವು ಉಚ್ಚಾಟಿಸಿದುದು ನಿಜವಾಗಿಯೂ ಕುತೂಹಲದಾಯಕ.

ಈ ಘಟನೆಯು ನಿರೀಕ್ಷಿತವೋ ಅನಿರೀಕ್ಷಿತವೋ ಎಂದು ಮೊದಲು ನೋಡಬೇಕಾಗಿದೆ. ರಾಜಕೀಯ ನಿರೀಕ್ಷಕರಿಗೆ ಅನಿರೀಕ್ಷಿತವಲ್ಲವಾದರೂ, ಇಷ್ಟು ಬೇಗನೆ, ಇಷ್ಟು ಸುಲಭದಲ್ಲಿ ಶ್ರೀ ಎ. ಕೆ. ಸುಬ್ಬಯ್ಯನವರನ್ನು ಉಚ್ಚಾಟಿಸಲಾಗುವುದು ಎಂದು ಮಾತ್ರ ಯಾವ ರಾಜಕೀಯ ನಿರೀಕ್ಷಿತರು ನಿರೀಕ್ಷೆ ಮಾಡಿರಲಾರರು ಎಂದ ಮೇಲೆ ಜನತೆಗೆ ಇದು ಅನಿರೀಕ್ಷಿತವೇ ಎನ್ನಬಹುದು.

ಎ. ಕೆ. ಸುಬ್ಬಯ್ಯನವರ ಉಚ್ಚಾಟನೆಗೆ ಬಿಜೆಪಿ ಪಕ್ಷದ 'ಹೈಕಮಾಂಡ್' ಕೊಟ್ಟ ಕಾರಣಗಳೇನು ? ಸುಬ್ಬಯ್ಯನವರು ಬಿಜೆಪಿ ಪಕ್ಷದಲ್ಲಿ ಒಡಕು ಉಂಟು ಮಾಡುತ್ತಾರೆಂದೂ, ಅವರು ಇತ್ತೀಚೆಗೆ ಪಕ್ಷದ ಹಲವು ನೇತಾರರ ಬಗ್ಗೆ ತೀರಾ ಆಶ್ಚರ್ಯದ ಉಲ್ಲೇಖಗಳನ್ನು, ಆರೋಪಗಳನ್ನು ಮಾಡಿರುತ್ತಾರೆಂದೂ....

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಬಿಜೆಪಿಯ ಬೆನ್ನೆಲುಬು ಮತ್ತು ಉಸಿರಾಗಿರುವ ಆರ್.ಎಸ್.ಎಸ್. ಸಂಸ್ಥೆಯ ಬಗ್ಗೆ ಮತ್ತು ಆರ್.ಎಸ್.ಎಸ್. ಮುಖಂಡರ ಬಗ್ಗೆ ಲಂಚಗುಳಿತನ, ವಿಷಯ ಲಂಪಟತನ, ಪಿತೂರಿ, ಹಣ ತಿಂದುಹಾಕುವಿಕೆ, ಜಾತೀಯ ಗಲಭೆಗಳ ಮೂಲ ಕಾರಣರು....ಎಂಬಿತ್ಯಾದಿ ಆರೋಪಗೈದುದೇ....ಶ್ರೀಮಾನ್ ಸುಬ್ಬಯ್ಯನವರ ಉಚ್ಚಾಟನೆಗೆ ಕಾರಣಗಳು.

ಮೊಟ್ಟ ಮೊದಲು ಇತರರು ನೋಡಬೇಕಾದುದು ಈ ಆರೋಪಗಳಲ್ಲಿ ಹೊಸತೇನಾದರೂ ಇದೆಯೋ ಎಂದು.

ಜಾತೀಯತೆ ಮತ್ತು ಜಾತಿ ಗಲಭೆಗಳು

ಬಿಜೆಪಿ ಹುಟ್ಟಿದಾರಂಭದಿಂದ ಅದೊಂದು ಜಾತೀಯತೆಗೆ, ಮಹತ್ವ ಕೊಡುತ್ತಾ ಬಂದ, ಅದರಲ್ಲೂ ಬಹುಮತೀಯ ಹಿಂದೂ ಜಾತೀಯತೆಗೆ ಪ್ರಾಮುಖ್ಯತೆ ಕೊಡುತ್ತಾ ಬಂದ ಪಕ್ಷ. ಅದು ಆರಂಭದಿಂದಲೂ ಜಾತೀಯ ಗಲಭೆಗಳನ್ನು, ಅದರಲ್ಲೂ ಹಿಂದೂ ಮುಸ್ಲಿಂ ಗಲಭೆಗಳನ್ನು ಎಬ್ಬಿಸಿ ಗಾಳಿ ಹಾಕಿ ಹೆಚ್ಚಿಸುವುದರಲ್ಲಿ ಆಸಕ್ತಿವುಳ್ಳ ಪಕ್ಷ. ಅದರ ಪೂರ್ವ ಪಕ್ಷ 'ಜನ ಸಂಘ' ಎಂದಿರುವಾಗ ಇದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆದ ಕಾರಣ ಶ್ರೀಮಾನ್ ಸುಬ್ಬಯ್ಯನವರು ಬಿಜೆಪಿಯ ಬಗ್ಗೆ ಈ ಆರೋಪವನ್ನು ಹೊರಿಸಿದುದರಲ್ಲಿ ಹೊಸತೇನೂ ಇಲ್ಲ ಎನ್ನಬೇಕಾಗಿದೆ.

ಲಂಚಗುಳಿತನ ಮತ್ತು ಹಣ ತಿಂದು ಹಾಕುವಿಕೆ

ಬಂಡವಾಳಶಾಹಿ ಮತ್ತು ಭೂಮಾಲಕ ವರ್ಗಗಳ ಪಕ್ಷ ಬಿಜೆಪಿಯಾಗಿರುವುದರಿಂದಲೂ, ವರ್ಗ ಸಮಾಜದಲ್ಲಿ ಅತ್ಯಂತ ತೀವ್ರ ವ್ಯವಸ್ಥೆ ರಕ್ಷಕ ಬಲವಾದಿಗಳಾಗಿರುವುದರಿಂದಲೂ ಈ ಪಕ್ಷಕ್ಕೆ ಲಂಚಗುಳಿತನ ಮತ್ತು ಹಣ ತಿಂದು ಹಾಕುವ ಗುಣಗಳು ಇತರ ಬಂಡವಾಳಶಾಹಿ ಮತ್ತು ಭೂಮಾಲಕ ವರ್ಗಗಳ ಪಕ್ಷಗಳಿಗಿರುವಂತೆ 'ಸ್ವಾಭಾವಿಕ'. ಈ ವರ್ಗಗಳು ಕಾರ್ಯ ನಿರ್ವಹಣೆ ಮಾಡುವ ವಿಧಾನಗಳೇ ಈ ರೀತಿ. ವ್ಯವಸ್ಥೆಯನ್ನೆ 'ಕೊಳೆಯಿಸಿ' ಅದರಿಂದ ಏನಾದರೂ ಜನತೆಗೆ ಅಲ್ಪಸ್ವಲ್ಪ ಒಳ್ಳೆಯ ಕೆಲಸವಾಗುವುದಿದ್ದರೂ ಅದನ್ನು ತಪ್ಪಿಸುವ ರೀತಿ—ವಿಧಾನ ಇದು. ಆದ್ದರಿಂದ, ಬಿಜೆಪಿಯ ಬಗ್ಗೆ ಈ ಆರೋಪಗಳಲ್ಲಿ ನವೀನತೆ ಏನಿಲ್ಲ.

ಇನ್ನು ವಿಷಯ ಲಂಪಟರೆನ್ನುವ ಆರೋಪ ಅಷ್ಟೇ ಸಹಜ—ಗೊತ್ತಿದ್ದವರಿಗೆ. ಆದರೆ, ಆಶ್ಚರ್ಯವೇನೆಂದರೆ ಶ್ರೀಮಾನ್ ಸುಬ್ಬಯ್ಯನವರು ಈ ಮಾತುಗಳನ್ನು ಆಡಿದುದು ಯಾವ ವೃಕ್ಷದ ಆಶ್ರಯದಲ್ಲಿ ಅವರು ಬೆಳೆದು ಬಂದರೋ ಅದೇ ವೃಕ್ಷದ ಬುಡವನ್ನೇ ಶ್ರೀಮಾನ್ ಸುಬ್ಬಯ್ಯನವರು ಕಡಿಯಲು ಹೊರಟಿರುವುದು ನಿಜಕ್ಕೂ ಆಶ್ಚರ್ಯ !

ಆರ್.ಎಸ್.ಎಸ್. ನ್ನು 'ಇಂದಿರಾ ಗಾಂಧಿಗಿಂತಲೂ ಅಪಾಯಕರ', ಫ್ಯಾಸಿಸ್ಟ್, ದೇಶದ ಐಕ್ಯತೆಗೆ ವಿಷ ಹಿಂಡುವ ಸಂಸ್ಥೆ.... ಎಂದೂ ಹೇಳಿದುದು ಖಂಡಿತಕ್ಕೂ ಆಶ್ಚರ್ಯ.

(8ನೇ ಪುಟ ನೋಡಿ)

ನೆರೆಹೊರೆ

ಪಶ್ಚಿಮ ಬಂಗಾಲ: ಕಾಂಗ್ರೆಸ್(ಐ) ಕುಮ್ಮಕ್ಕಿನಿಂದ ಅನಗತ್ಯ ಮುಷ್ಕರ

ಕಿರಿಯ ಡಾಕ್ಟರುಗಳ ವಿಭಾಗವೊಂದು ಜೂನ್ 13 ರಿಂದ 4 ದಿನ ಮುಷ್ಕರ ನಡೆಸಿ ರೋಗಿಗಳಿಗೆ ಹಾಗೂ ಆಸ್ಪತ್ರೆ ಅಧಿಕಾರಿಗಳಿಗೆ ಬಹಳಷ್ಟು ಕಿರುಕುಳವುಂಟುಮಾಡಿತು. ಮಾತುಕತೆಯಿಂದ ಸುಲಭವಾಗಿ ಪರಿಹರಿಸಬಹುದಾಗಿದ್ದ ವಿಷಯದಲ್ಲಿ ಈ ಡಾಕ್ಟರುಗಳು ಕಾಂಗ್ರೆಸ್ (ಐ) ಕುಮ್ಮಕ್ಕಿನಿಂದ ಅನಗತ್ಯ ಮುಷ್ಕರಕ್ಕಿಳಿದರು. ಅನಂತರ ಮುಖ್ಯಮಂತ್ರಿಗಳೊಂದಿಗೆ ನಡೆದ ಮಾತುಕತೆಯ ಸಮಯದಲ್ಲಿ ಇದು ಸ್ಪಷ್ಟವಾಯಿತು.

ಈ ಮುಷ್ಕರಕ್ಕೆ ಪ್ರಚೋದನೆಯೆಂದರೆ ಬರ್ದ್ವಾನ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ಸೂಪರಿಂಟೆಂಡೆಂಟ್‌ರನ್ನು ಥಳಿಸಿದಆರೋಪದ ಮೇಲೆ ಇಬ್ಬರು ಕಿರಿಯ ಡಾಕ್ಟರುಗಳ ವಜಾ.

ಈ ಬಗ್ಗೆ ತಮ್ಮ ಅಳಲನ್ನು ಡಾಕ್ಟರುಗಳು ಬೇರೆ ರೀತಿಯಲ್ಲಿ ತೋರ್ಪಡಿಸಿಕೊಳ್ಳಬಹುದಾಗಿತ್ತು. ಮುಖ್ಯಮಂತ್ರಿ ಜ್ಯೋತಿಬಸುರವರೇ ಮಾತುಕತೆಯ ಸಮಯದಲ್ಲಿ "ಇಬ್ಬರು ಡಾಕ್ಟರುಗಳನ್ನು ವಜಾ ಮಾಡಿದ ರೀತಿ ಎಲ್ಲಾ ವಿಧಿ-ವಿಧಾನಗಳಿಗೂ, ಸ್ವಾಭಾವಿಕ ನ್ಯಾಯಕ್ಕೂ ವಿರೋಧವಾಗಿತ್ತು" ಎಂದು ಅಭಿಪ್ರಾಯ ಪಟ್ಟಿರುವಾಗ ಮುಷ್ಕರ ನಡಸಿ ಜನಗಳಿಗೆ ತೊಂದರೆ ಮಾಡದೆಸಮಸ್ಯೆಪರಿಹರಿಸಬಹುದಿತ್ತು. ವಜಾ ಪತ್ರಗಳನ್ನು ಹಿಂತೆಗೆದುಕೊಂಡು ಮತ್ತೆ ತನಿಖೆ ನಡೆಸಲಾಗುವುದೆಂದು ಮುಖ್ಯಮಂತ್ರಿಗಳು ಮುಷ್ಕರನಿರತ ಡಾಕ್ಟರುಗಳಿಗೆ ಹೇಳಿದರು. ಜೂನ್ 17ರಂದು ಮುಷ್ಕರ ಕೊನೆಗೊಂಡಿತು. ಮಾತುಕತೆಯ ಸಂದರ್ಭದಲ್ಲಿ, ಕೇಂದ್ರ ಸರಕಾರ ಆಸ್ಪತ್ರೆಮಸೂದೆ ಇತ್ಯಾದಿ ಕರಾಳ ಮಸೂದೆಗಳ ಮೂಲಕ ಡಾಕ್ಟರುಗಳೂ ಹಾಗೂ ಇತರ ದುಡಿಯುವ ಜನತೆಯ ಮೇಲೆ ಹಲ್ಲೆ ನಡೆಸುತ್ತಿದ್ದರೆ, ಎಡರಂಗ ಸರಕಾರ ಡಾಕ್ಟರುಗಳೂ ಸೇರಿದಂತೆ ಎಲ್ಲಾ ದುಡಿಯುವ ಜನತೆಯ ಹಿತಾಸಕ್ತಿಗಳನ್ನು ಕಾಪಾಡಲು ಹೇಗೆ ಪ್ರಯತ್ನಿಸುತ್ತಿದೆ, ಹೇಗೆ ಉತ್ತಮ ಸೇವಾ ಸೌಲಭ್ಯ ಒದಗಿಸುತ್ತಿದೆ ಎಂಬುದನ್ನು ಜ್ಯೋತಿಬಸುರವರು ವಿವರಿಸಿದರು.

ಕೇರಳ: ಹಠದ ನಿಲುವು-ಒಪ್ಪಂದ ಪಾಲಿಸಲಿಕ್ಕೂ ಚಳವಳಿ

ಕರುಣಾಕರನ್‌ರವರ ಕಾಂಗ್ರೆಸ್(ಐ) ನೇತೃತ್ವದ ಸರ್ಕಾರದ ಕಾರ್ಮಿಕ ವರ್ಗ ವಿರೋಧೀ ಧೋರಣೆ ವಿಲಕ್ಷಣವಾಗಿದೆ. ಕಾರ್ಮಿಕರು ಮತ್ತು ನೌಕರರು ಯಾವುದಾದರೂ ಬೇಡಿಕೆ ಮಂಡಿಸಿದಾಗ ಅದನ್ನು ಮನ್ನಿಸುವುದಿಲ್ಲವೆಂದು ಹಠದ ಧೋರಣೆ ತಳೆಯುವುದು, ಅಂತಿಮವಾಗಿ ಮಾತುಕತೆಗೆ ಬರಲೇಬೇಕಾದಾಗ ಒಪ್ಪಂದ ಮಾಡಿಕೊಂಡು ಅದನ್ನು ತಿಂಗಳುಗಟ್ಟಲೆ ಜ್ಯಾರಿಗೊಳಿಸದೆಸುಮ್ಮನಿದ್ದು ಕಾರ್ಮಿಕರಿಗೆ ಮತ್ತು ನೌಕರರಿಗೆ ವಂಚನೆಮಾಡುವುದು. ಇದರಿಂದಾಗಿ ಒಪ್ಪಂದವನ್ನು ಪಾಲಿಸುವಂತೆ ಮಾಡಲೂ ಕೂಡ ಮುಷ್ಕರ ನಡೆಸಲೇಬೇಕಾಗಿ ಬಂದಿದೆ. ಕಾಂಗ್ರೆಸ್(ಐ) ನೇತೃತ್ವದ ಸರಕಾರದ ಈ ನಾಚಿಕೆಗೇಡಿನ ನಿಲುವಿಗೆ ಇತ್ತೀಚಿನ ವಿದ್ಯುಚ್ಛಕ್ತಿ ಕಾರ್ಮಿಕರ ಮುಷ್ಕರ ಒಂದು ಉದಾಹರಣೆ.

ಇನ್ನೊಂದು ಉದಾಹರಣೆ— ರಾಜ್ಯದ ಗ್ರಾಮ ಕಛೇರಿಗಳ ಸರಕಾರೀ ನೌಕರರ ಮುಷ್ಕರ. ಅವರು ಜೂನ್ 14 ರಿಂದ ಹನ್ನೊಂದು ದಿನಗಳ ಕಾಲ ಮುಷ್ಕರ ನಡೆಸಬೇಕಾಗಿ ಬಂದದ್ದು ಯಾವುದೇ ಹೊಸ ಬೇಡಿಕೆ ಈಡೇರಿಸಲಿಕ್ಕೆ ಅಲ್ಲ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಆದ ಒಪ್ಪಂದವನ್ನು ಜ್ಯಾರಿಗೊಳಿಸುವುದಕ್ಕಾಗಿ. ಕೊನೆಗೂ ರೆವಿನ್ಯೂ ಮಂತ್ರಿಯವರೊಂದಿಗೆ ಮಾತುಕತೆ ನಡೆದು ಮುಷ್ಕರ ನಿಂತಿತು. ಸರ್ಕಾರ ತಾನೇ ಮಾಡಿಕೊಂಡ ಒಪ್ಪಂದವನ್ನು ಪಾಲಿಸಿದ್ದರೆ ಗ್ರಾಮಗಳಲ್ಲಿನ ಜನತೆ, ವಿಶೇಷವಾಗಿ ಪರಿಶಿಷ್ಟ ಜಾತಿ/ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಅನಗತ್ಯ ತೊಂದರೆ ಎದುರಿಸಬೇಕಾದ ಸಂದರ್ಭ ಬರುತ್ತಿರಲಿಲ್ಲ.

ಒಳನಾಡ ಜಲಸಾರಿಗೆ ಇಲಾಖೆಯ ನೌಕರರ ಬೇಡಿಕೆಗಳದೂ ಇದೇ ಕಥೆ. ಹಿಂದೆ ಇದ್ದ ಸಾರಿಗೆ ಕಾರ್ಪೊರೇಶನ್‌ನ ನೌಕರರನ್ನು ಇಲಾಖೆಯ ನೌಕರರನ್ನಾಗಿ ಸೇರಿಸಿಕೊಂಡಾಗ ಅಂತಹ ನೌಕರರ ಪಿಂಚಣಿ ಲೆಕ್ಕಹಾಕುವಾಗ ಕಾರ್ಪೊರೇಷನ್‌ನಲ್ಲಿ ಅವರ ಸೇವಾವಧಿಯನ್ನು ಪರಿಗಣಿಸಬೇಕೆಂದು ನೌಕರರ ಬೇಡಿಕೆಯ ಬಗ್ಗೆ ಕಳೆದ ಜುಲೈ ತಿಂಗಳಿನಲ್ಲಿ ಒಂದು ಒಪ್ಪಂದವೇರ್ಪಟ್ಟಿತ್ತು. ಆದರೆ ಆ ನಂತರ ಹಲವಾರು ಮನವಿ ನೀಡಿದರೂ ಇದನ್ನು ಸರಕಾರ ಜ್ಯಾರಿಗೊಳಿಸಲಿಲ್ಲ. ಕೊನೆಗೆ ನಿರ್ವಾಹವಿಲ್ಲದೆ ಕಾರ್ಮಿಕರು ಜುಲೈ 1 ರಿಂದ ಮುಷ್ಕರ ಹೂಡಬೇಕಾಯಿತು. ಮುಷ್ಕರ ಹತ್ತು ದಿನಗಳ ಕಾಲ ನಡೆದ ಮೇಲಷ್ಟೆ ಸರಕಾರ ಜಾಗೃತಗೊಂಡಿತು.

ಉತ್ತರ ಪ್ರದೇಶ:

ಎರಡು ಬ್ಲಾಕುಗಳಲ್ಲೂ ಸಿ.ಪಿ.ಐ.(ಎಂ)ಗೆ ಜಯ

ಚಮೋಲಿ ಜಿಲ್ಲೆಯ ಘಾಟ್ ಮತ್ತು ಜೋಶೀಮಠದ ಬ್ಲಾಕ್ ಪ್ರಮುಖ ಚುನಾವಣೆಯಲ್ಲಿ ಸಿ. ಪಿ. ಐ. (ಎಂ.) ನ ಅಭ್ಯರ್ಥಿಗಳಾದ ಸುದರ್ಶನ ಕಥ್ಯಾತ್ ಹಾಗೂ ಬಚ್ಚನ್ ಸಿಂಗ್ ಗೆದ್ದಿದ್ದಾರೆ. ಒಟ್ಟು 11 ಬ್ಲಾಕುಗಳಲ್ಲಿ ಮೂರರಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸಿದ್ದು ಮೂರನೇ ಅಭ್ಯರ್ಥಿಯಾದ ಗಂಗಾಧರ್ ನೇಟಿಯಾರ್ ಸೋತಿರುವುದು ಕೂಡ ಅತೀ ಕಮ್ಮೀ ಮತಗಳ ಅಂತರದಲ್ಲಿ.

ಈ ಚುನಾವಣೆಗಳಲ್ಲಿ ಸಿ. ಪಿ. ಐ (ಎಂ) ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಸಖ್ಯ ಸಾಧಿಸಲು ಪ್ರಯತ್ನಿಸಿತು. ಆದರೆ ಸಿ. ಪಿ. ಐ. ಹಾಗೂ ಡಿ.ಎಸ್.ಪಿ.ಯ ಅಸಹಕಾರ ಮನೋಭಾವದಿಂದಾಗಿ ಅದು ಫಲಿಸಲಿಲ್ಲ.

ತ್ರಿಪುರಾ ನಗರಸಭೆ ಚುನಾವಣೆಯಲ್ಲಿ ವಿಜಯ

ತ್ರಿಪುರಾದ ರಾಜಧಾನಿ ಅಗರ್ತಲಾ ನಗರ ಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗವು ಎಲ್ಲಾ ಸ್ಥಾನಗಳನ್ನು ಗೆದ್ದುಕೊಂಡಿದೆ.

ಹಾಲಿ ಇದ್ದ 13 ಸ್ಥಾನಗಳಲ್ಲಿ ಎಡರಂಗ ಸ್ಪರ್ಧಿಸಿತ್ತು. ಕಾಂಗ್ರೆಸ್ (ಐ) ಕೂಡ ಎಲ್ಲಾ ಸ್ಥಾನಗಳಿಗೂ ಎಡರಂಗಕ್ಕೆದುರಾಗಿ ಸ್ಪರ್ಧಿಸಿ ಎಲ್ಲಾ ಸ್ಥಾನಗಳಲ್ಲೂ ಪರಾಭವಗೊಂಡಿತು. 6 ಮಂದಿ ಸ್ವತಂತ್ರ ಅಭ್ಯರ್ಥಿಗಳೂ ಸಹ ಸ್ಪರ್ಧಿಸಿ ಸೋತರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಗಳಿಸಿಕೊಂಡಿರುವ ಜನಪ್ರಿಯತೆಗೆ ಸಾಕ್ಷಿಯಾಗಿ ಈ ಫಲಿತಾಂಶ ಮೂಡಿಬಂದಿದೆ.

ಎಡರಂಗದ ಆಡಳಿತದ ವಿರುದ್ಧ ಕಾಂಗ್ರೆ ಮತ್ತಿತರ ಪ್ರತಿಗಾಮಿ ಪಕ್ಷಗಳು ನಡೆಸುತ್ತಿರುವ ಕುತಂತ್ರಗಳನ್ನು, ಸುಳ್ಳು ಅಪಾದನೆಗಳನ್ನು ಧಿಕ್ಕರಿಸುವ ದಿಕ್ಕಿನತ್ತ ಪ್ರಸ್ತುತ ಫಲಿತಾಂಶ ಅಡಿಯಿರಿಸಿದೆ.

ವಿರೋಧ ಪಕ್ಷಗಳ ಸಮ್ಮೇಳನ: ಪಂಜಾಬಿನಲ್ಲಿ ಹಿಂಸೆ ಹಾಗೂ ಕೋಮುವೈರ ಕೊನೆಗಾಣಿಸಲು ಆದ್ಯತೆಗೆ ಕರೆ

ಜೂನ್ 30ರಂದು ನವದೆಹಲಿಯಲ್ಲಿ ಸೇರಿದ ವಿವಿಧ ಕಾಂಗ್ರೆಸ್ಸೇತರ ರಾಷ್ಟ್ರೀಯಪಕ್ಷಗಳು ಹಾಗೂ ರಾಜ್ಯಮಟ್ಟದ ಪಕ್ಷಗಳ ಮುಂದಾಳುಗಳ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ಸೌರಾಷ್ಟ್ರದಲ್ಲಿ ನೆರೆ ಪರಿಹಾರಕ್ಕಾಗಿ ಸರ್ವಪಕ್ಷ ಸಮಿತಿ ರಚಿಸುವ ಬಗ್ಗೆ, ಪುದುಚೇರಿಯಲ್ಲಿ ಸಂವಿಧಾನವನ್ನು ನಿರ್ಲಕ್ಷಿಸಿ ವಿಧಾನಸಭೆಯನ್ನು ವಿಸರ್ಜಿಸುವುದರ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮೂಡಿಸಬೇಕೆಂಬ ಬಗ್ಗೆ ನಿರ್ಣಯ ಅಂಗೀಕರಿಸಲಾಯಿತು.

ಪಂಜಾಬಿನ ಪರಿಸ್ಥಿತಿ ಕುರಿತು ಅಂಗೀಕರಿಸಿದ ಪ್ರಮುಖ ಠರಾವಿನಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ರಕ್ತಹರಿಸಿದ ಪಂಜಾಬಿನ ಜನತೆಯ ಒಗ್ಗಟ್ಟಿಗೆ ಭಂಗ ಬಂದಿರುವುದರ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಲಾಯಿತು. ಪ್ರತಿಯೊಂದು ಸಮಸ್ಯೆಯನ್ನು ದೀರ್ಘಕಾಲ ಎಳೆದು ಅದರಿಂದ ರಾಜಕೀಯ ದುರ್ಲಾಭಪಡೆಯುವ ಕೇಂದ್ರ ಸರ್ಕಾರದ ಪ್ರವೃತ್ತಿಯೇ ಈಗಿನ ದಾರುಣ ಹಾಗೂ ಸ್ಫೋಟಕ ಪರಿಸ್ಥಿತಿಗೆ ಕಾರಣ ಎಂದು ಹೇಳಿರುವ ಠರಾವಿನಲ್ಲಿ ಕಾಲಹರಣದ ಧೋರಣೆ ಇನ್ನಷ್ಟು ಭಯಾನಕ ಪರಿಣಾಮ ಬೀರಿದೆಯೆಂದು ಕೇಂದ್ರ ಸರಕಾರವನ್ನು ಎಚ್ಚರಿಸಲಾಗಿದೆ.

ಅಖಿಲ ಭಾರತ ಗುರುದ್ವಾರ ಶಾಸನ ತರುವುದರಲ್ಲಿ ಈಗ ಯಾವ ಅಡ್ಡಿಯೂ ಉಳಿದಿಲ್ಲ. ಅಕಾಲಿ ಚಳವಳಿಯ ಇನ್ನೊಂದು ಬೇಡಿಕೆಯಾದ ನದಿ ನೀರಿನ ವಿವಾದವನ್ನು ಟ್ರಿಬ್ಯೂನಲ್‌ಗೆ ಒಪ್ಪಿಸಲು ಕೂಡ ಈಗ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಇನ್ನೂ ಪರಿಹಾರ ಕಾಣದಿರುವ ಸಮಸ್ಯೆಯೆಂದರೆ ಪಂಜಾಬ್ ಮತ್ತು ಹರಿಯಾಣ ನಡುವೆ ಚಂಡೀಗಢ ಹಾಗೂ ಇತರ ವಿವಾದಾಸ್ಪದ ಪ್ರದೇಶಗಳನ್ನು ಕುರಿತಾಗಿದೆ. ಚಂಡೀಗಢವನ್ನು ಪಂಜಾಬಿಗೆ ನೀಡಿ, ಪರಸ್ಪರ ಹೊಂದಾಣಿಕೆಯ ಮನೋಭಾವದಿಂದ ಕೆಲವು ಪ್ರದೇಶಗಳನ್ನು ಹರ್ಯಾಣಕ್ಕೆ ಕೊಡಬೇಕು, ಹರ್ಯಾಣಕ್ಕೆ ಬೇರೊಂದು ರಾಜಧಾನಿ ನಿರ್ಮಿಸಲು ಪರಿಹಾರ ನೀಡಬೇಕು ಎಂದು ಸಭೆಯಲ್ಲಿ ಒಪ್ಪಂದಕ್ಕೆ ಬರಲಾಯಿತು. ಅಕಾಲಿದಳ "ಖಲಿಸ್ಥಾನ"ದ ಬೇಡಿಕೆಗೆ ಹಾಗೂ ಹಿಂಸೆ ಮತ್ತು ಕೋಮು ವೈರಕ್ಕೆ ತನ್ನ ನಿಸ್ಸಂದಿಗ್ಧ ವಿರೋಧ ವ್ಯಕ್ತಪಡಿಸಿರುವುದನ್ನು ಠರಾವಿನಲ್ಲಿ ಗಮನಿಸಲಾಗಿದ್ದು ಹಿಂಸೆ ಹಾಗೂ ಕೋಮು ವೈರವನ್ನು ತಕ್ಷಣ ಕೊನೆಗೊಳಿಸಬೇಕಾದ ಕೆಲಸಕ್ಕೆ ಆದ್ಯತೆ ನೀಡಬೇಕೆಂದು ಕರೆನೀಡಲಾಗಿದೆ. ಚಳವಳಿಯ ಬೇಡಿಕೆಗಳಲ್ಲಿ ಹೆಚ್ಚಿನವು ಸಮಸ್ತ ಪಂಜಾಬೀ ಜನತೆಯ ಬೇಡಿಕೆಗಳಾಗಿದ್ದರೂ ಚಳವಳಿಗೆ ಕೋಮು ಬಣ್ಣ ನೀಡುವ ಪ್ರಯತ್ನಗಳಿಗೆ ಠರಾವಿನಲ್ಲಿ ಅಸಮ್ಮತಿ ಸೂಚಿಸಲಾಗಿದೆ.

ಪಂಜಾಬಿನ ಜನತೆಯಲ್ಲಿ ಸಾಂಪ್ರದಾಯಿಕ ಸ್ನೇಹ ಹಾಗೂ ಸೋದರ ಭಾವ ಪುನಃ ಸ್ಥಾಪಿಸುವಲ್ಲಿ ನೆರವಾಗಲು ಒಂದು ಸರ್ವಪಕ್ಷ ತಂಡವನ್ನು ಕಳಿಸಲು ನಿರ್ಧರಿಸಲಾಯಿತು.

ಸಿ.ಪಿ.ಐ.(ಎಂ.) ನ ಪಂಜಾಬ್ ರಾಜ್ಯ ಸಮಿತಿ ಪಂಜಾಬಿನ ಸಮಸ್ತ ಜನತೆಯನ್ನುದ್ದೇಶಿಸಿ ಜುಲೈ 3 ರಂದು ಒಂದು ದೀರ್ಘ ಮನವಿಯನ್ನು ಜ್ಯಾರಿಗೊಳಿಸಿ ಅದರಲ್ಲಿ ವಿರೋಧ ಪಕ್ಷಗಳ ಸಭೆಯ ಠರಾವಿಗೆ ಬೆಂಬಲ ನೀಡಲು ಜನತೆಗೆ ಕರೆ ನೀಡಿದೆ. ಸಂಕುಚಿತ ಪಂಥವಾದೀ ದೃಷ್ಟಿಯಾಗಲೀ, ಸುಯೋಜಿತ ಪ್ರಚೋದನೆಗಳಾಗಲೀ ಪಂಜಾಬೀ ಜನತೆಯ ಐಕ್ಯತೆಯನ್ನು, ದೇಶದ ಸಮಗ್ರತೆಯನ್ನು ರಕ್ಷಿಸುವಲ್ಲಿ ನಮ್ಮನ್ನು ಹಿಂಜರಿಯುವಂತೆ ಮಾಡದಿರಲಿ ಎಂದು ರಾಜ್ಯ ಸಮಿತಿ ಮನವಿ ಮಾಡಿಕೊಂಡಿದೆ.

ಪಾಲಿಟ್‌ಬ್ಯೂರೋ ನಿರ್ಣಯಗಳು: ಆರ್ಥಿಕ ಪರಿಸ್ಥಿತಿ

ದೇಶದ ಆರ್ಥಿಕ ಪರಿಸ್ಥಿತಿಯನ್ನು ವಿಮರ್ಶಿಸುತ್ತ ಆಳುವ ಪಕ್ಷ ಹೇಳುತ್ತಿರುವ "ಸ್ಥಿರತೆ" "ಪ್ರಗತಿ" ಸುಳ್ಳಿನ ಕಂತೆಯಾಗಿದೆಂದೂ, ಪ್ರತಿವಾರವೂ ಹೆಚ್ಚಾಗುತ್ತಿರುವ ಬೆಲೆಯ ಹೆಚ್ಚಳವನ್ನು ಅಧಿಕಾರಿಗಳಿಗೂ ನಿರಾಕರಿಸಲು ಸಾಧ್ಯವಾಗುತ್ತಿಲ್ಲೆಂದೂ ಪಿ. ಬಿ. ಅಭಿಪ್ರಾಯ ವ್ಯಕ್ತಮಾಡಿದೆ. ಈ ಬೆಲೆ ಏರಿಕೆಯು ಸಮಾಜದ ಪ್ರತಿಯೊಂದು ವರ್ಗವನ್ನೂ ಭಾದಿಸುತ್ತಿದೆಯೆಂದೂ, ಬರಗಾಲ, ನೆರೆ ಹಾವಳಿಯಂಥವುಗಳೆಲ್ಲ ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿವೆ. ಜನ ಜೀವನವನ್ನು ಭಾಧಿಸುತ್ತಿರುವ ಮುಖ್ಯ ಸಮಸ್ಯೆಗಳ ಪರಿಹಾರಕ್ಕಾಗಿ ವಿಶಾಲ ತಳಹದಿಯ ಚಳುವಳಿಯನ್ನು ಎಲ್ಲ ಸಾಮೂಹಿಕ ಸಂಘಟನೆಗಳೂ, ವಿರೋಧ ಪಕ್ಷಗಳ ಜೊತೆಯಲ್ಲಿ ಸೇರಿ ನಡೆಸಬೇಕೆಂದು ಪಿ. ಬಿ. ಕರೆ ಕೊಟ್ಟಿದೆ.

ಕಾರ್ಮಿಕ ವರ್ಗದ ಮೇಲೆ ಧಾಳಿ

ಕಾರ್ಮಿಕ ವರ್ಗದ ಮೇಲೆ ಅದರಲ್ಲೂ ಸಿ. ಐ. ಟಿ. ಯು.ವಿನ ಮೇಲೆ ಸಂಘಟಿತ ದಾಳಿ ನಡೆದಿದೆ. ಮೋದಿ ನಗರದಲ್ಲಿ (ಯು.ಪಿ) ಸಿ.ಐ.ಟಿ.ಯು ನ ಸಕ್ರಿಯ ಕಾರ್ಯಕರ್ತರ ಮತ್ತು

(7ನೇ ಪುಟ ನೋಡಿ)

ಬೆಲೆಯೇರಿಕೆ ವಿರುದ್ಧ ಹೋರಾಟ ನಡೆಯಲಿ

ಆಗಸ್ಟ್ 11ರಂದು ರಾಜ್ಯಾದ್ಯಂತ ಬೆಲೆಯೇರಿಕೆಯ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ಎಲ್ಲ ಪಾರ್ಟಿ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಿಗೂ ಕರೆ ನೀಡಿದೆ.

ರಾಜ್ಯ ಸಮಿತಿ ಈ ನಿರ್ಣಯ ಕೈಗೊಂಡ ದಿವಸವೇ ಅಖಿಲ ಭಾರತ ಬಳಕೆಗಾರರ ಬೆಲೆ ಸೂಚ್ಯಾಂಕ ಪ್ರಕಟವಾಗಿತ್ತು. 1960ರ ಬೆಲೆಗೆ ಹೋಲಿಸಿದರೆ ಮೇ ತಿಂಗಳ ಬೆಲೆ ಸೂಚ್ಯಾಂಕ 13 ಅಂಕ ಹೆಚ್ಚಾಗಿ 521 ಆಗಿದೆ. 1949ರಲ್ಲಿ ಅಂಕ 100 ಎಂದು ಪರಿಗಣಿಸಿದರೆ ಅದು ಈಗ 633 ಆಗುತ್ತದೆ. ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು.

ಈ ಸುದ್ದಿ ಪ್ರಕಟವಾಗುವ ಕೆಲವು ದಿವಸಗಳ ಮುಂಚೆ ಮತ್ತೊಂದು ವಿಷಯವೂ ಪತ್ರಿಕೆಗಳಲ್ಲಿ ಬೆಳಕು ಕಂಡಿತು. ಅದೇನೆಂದರೆ ಜುಲೈ 1982ರಂದು ಒಂದು ರೂಪಾಯಿಯ ಮೌಲ್ಯ 20.9 ಇತ್ತು. 1983 ಜೂನ್ ತಿಂಗಳಲ್ಲಿ ಅದರ ಮೌಲ್ಯ 19.2ಕ್ಕೆ ಇಳಿಯಿತು ಎಂದು ಪ್ರಕಟವಾಗಿತ್ತು.

ಇದರರ್ಥವೇನು ? ಒಂದು ಕಡೆ ರೂಪಾಯಿಯ ಮೌಲ್ಯ ಅಂದರೆ ಮಾರ್ಕೆಟಿನಲ್ಲಿ ನೀವು ಯಾವದೇ ವಸ್ತುವನ್ನು ಕೊಂಡುಕೊಳ್ಳುವಾಗ 100 ಪೈಸೆಯನ್ನು ಬರೇ 19.2 ಪೈಸೆ ಎಂದು ಪರಿಗಣಿಸಲಾಗುವುದು. ಒಂದು ರೂಪಾಯಿಗೆ ಐದು ಬಾಳೆ ಹಣ್ಣು ಸಿಗುತ್ತಿದ್ದರೆ ಅದೇ ಒಂದು ರೂಪಾಯಿಗೆ ಒಂದು ಬಾಳೆ ಹಣ್ಣು ಸಿಗುತ್ತದೆ ಎಂದರ್ಥ. ಎರಡನೆಯದೆಂದರೆ ಮಾರ್ಕೆಟಿನಲ್ಲಿ ಎಲ್ಲಾ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ರೂಪಾಯಿಗೆ 5ರಂತೆ ಸಿಗುತ್ತಿದ್ದ ಬಾಳೆಹಣ್ಣು ಈಗ ರೂಪಾಯಿಗೆ ಮೂರೇ ಸಿಗುವಂತಾಗಿದೆ. ರೂಪಾಯಿಯ ಮೌಲ್ಯದಲ್ಲಿ ಇಳಿತ ಒಂದು ಕಡೆ, ಬೆಲೆ ಏರಿಕೆ ಮತ್ತೊಂದು ಕಡೆ ಹೀಗಾಗಿ ಗ್ರಾಹಕ ಇಕ್ಕಳದಲ್ಲಿ ಸಿಕ್ಕಿ ಬಿದ್ದು ಒದ್ದಾಡುವಂತಾಗಿದೆ.

ಹಿಂದಿನಿಂದಲೂ ಹೆಚ್ಚುತ್ತ ಬಂದಿದೆ

ಅತ್ಯಾವಶ್ಯಕ ವಸ್ತುಗಳ ಬೆಲೆ ಇದೇ ಈಗ ಮಾತ್ರ ಹೆಚ್ಚುತ್ತಿದೆಂದು ತಿಳಿಯುವುದು ತಪ್ಪು. ಕಳೆದ ಹಲವಾರು ವರ್ಷಗಳಿಂದಲೂ ಇದು ಹೆಚ್ಚಾಗುತ್ತಿರುವುದೂ ಕಂಡು ಬರುತ್ತಿದೆ. ಗ್ರಾಹಕರ ಬೆಲೆ ಹೆಚ್ಚಳದ ಸೂಚ್ಯಾಂಕ 1980ರಲ್ಲಿ 390, 1981ರಲ್ಲಿ 406, ಜುಲೈ 82ರಲ್ಲಿ 478 ಈಗ ಅದು 633.

ಇದೇ ರೀತಿ ಥೋಕ ವ್ಯಾಪಾರದ ಬೆಲೆ ಕೂಡ ಮೇಲಕ್ಕೆ ಜಿಗಿಯುತ್ತಲೇ ಇದೆ. ಥೋಕ ವ್ಯಾಪಾರದ ಬೆಲೆಯ ಹೆಚ್ಚಳ ಚಿಲ್ಲರೆ ವ್ಯಾಪಾರದ ಮೇಲೆ ಹೆಚ್ಚು ಪರಿಣಾಮ ಉಂಟುಮಾಡುತ್ತದೆ. ಹೆಚ್ಚಿದ ಥೋಕ ವ್ಯಾಪಾರದ ಬೆಲೆಯಲ್ಲಿ ಇಳಿತವಾಗುತ್ತಿದೆಂದು ಸಾರಲಾಗುತ್ತಿದ್ದರೂ ಕೂಡ ಏರಿದ ಬೆಲೆಯ ಮಟ್ಟದಿಂದ ಅರ್ಧ ಕೆಳಗಿಳಿಯುವುದಿಲ್ಲ. ಹೀಗಾಗಿ ತೋರಿಕೆಗೆ ಮಾತ್ರ ಇಳಿತ ಅಥವಾ ಸ್ಥಗಿತ. ಆದರೆ ನಿಜವಾಗಿಯೂ ಹೆಚ್ಚಳ. ವ್ಯಾಪಾರ ಹಾಗೂ ಮಾರ್ಕೆಟಿನ ಮೇಲೆ ಯಾವ ಹಿಡಿತವೂ ಇಲ್ಲದಿರುವುದರಿಂದ ಒಂದೇ ಸಮನೆ ಬೆಲೆ ಹೆಚ್ಚಾಗುತ್ತಲೇ ಇದೆ.

ಹೋದ ವರ್ಷ ಇದೇ ಸಮಯದಲ್ಲಿ ಯಾವ ಕಾಯಿಪಲ್ಲೆಗಳ ಬೆಲೆ ಕೆಜಿಗೆ ರೂ. 3ಕ್ಕಿಂತ ಹೆಚ್ಚಾಗಿರಲಿಲ್ಲ, ಈ ವರ್ಷ ಟೊಮೆಟೋ ರೂ. 10, ಹಾಗೆಯೇ ಇತರ ಕಾಯಿಪಲ್ಲೆಗಳ ಬೆಲೆ ಹೇಳಲಾರದಷ್ಟು ಹೆಚ್ಚಾಗಿದೆ. ಒಂದು ರೂಪಾಯಿಗೆ ಸಿಗುವ ವಸ್ತುವಿನ ಬೆಲೆ ರೂ. 4 ರಿಂದ 8 ರ ವರೆಗೂ ಏರಿದೆ. ಹಾಗೆಯೇ ಆಹಾರ ಧಾನ್ಯದ ಬೆಲೆ ಕೂಡ ಹೋದ ವರ್ಷ ಉತ್ತಮ ಅಕ್ಕಿಯ ಬೆಲೆ ರೂ. 3 ರಿಂದ ರೂ. 4 ರಷ್ಟಿತ್ತು. ಈ ವರ್ಷ ರೂ. 4-20 ರಿಂದ ರೂ. 5ಆಗಿದೆ. ಶೇಂಗಾ ಎಣ್ಣೆ ರೂ. 10-12ಕ್ಕಿಂತ ಹೆಚ್ಚಾಗಿರಲಿಲ್ಲ ಈ ವರ್ಷ ರೂ. 16 ರಿಂದ ಕೆಳಗಿಳಿಯಲಿಲ್ಲ, ಕೊಬ್ಬರಿ ಎಣ್ಣೆ, ಚಹಾಪುಡಿಗಳೆಲ್ಲ ರೂ 30ರ ಗಡಿ ದಾಟಿವೆ. ಉದ್ದು, ಹೆಸರು, ತೊಗರಿ, ಕಡಲೆ ಬೇಳೆಗಳು ರೂ 3 ರಿಂದ 5ರ ವರೆಗಿತ್ತು. ಈಗ ಅದು ರೂ 7ಕ್ಕೆ ಸಿಗುವುದಿಲ್ಲ. ಇದು ಮಾರ್ಕೆಟಿನ ವಾಸ್ತವ ಪರಿಸ್ಥಿತಿ. ಇದಕ್ಕೆ ಸಾಬೂನ, ಕಟ್ಟಿಗೆ, ಚಿಮಣಿಎಣ್ಣೆ, ಕೆಲಸದವಳ ಮಜೂರಿ, ಮನೆ ಬಾಡಿಗೆಗಳನ್ನೆಲ್ಲ ಸೇರಿಸಲೇಬೇಕು. ಆಗ ಮಾತ್ರ ಗಾಂಭೀರ್ಯತೆಯ ಅರಿವು ಮನದಟ್ಟಾಗುತ್ತದೆ.

1980ರಲ್ಲಿ ಇಂದಿರಾ ಗಾಂಧಿಯವರು ನಮ್ಮ ಮತದಾರರಿಗೆ ಆಶ್ವಾಸನೆಯೊಂದನ್ನು ನೀಡಿದ್ದರು. ಅದೇನೆಂದರೆ ಅತಿ ಪ್ರಸರಣಕ್ಕಾಗಲೀ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಳಕ್ಕಾಗಲೀ ನಾನು ಅವಕಾಶಮಾಡಿಕೊಡಲಾರೆ. ಆದರೆ ಅವರ ವಾಗ್ದಾನ ಮುರಿದಿದೆಂಬ ಸಂಗತಿ ಮೇಲಿನ ಲೆಕ್ಕಗಳಿಂದಲೂ ಹಾಗೆಯೇ ಸಾಧಾರಣ ನಾಗರೀಕನ ಜೀವನದ ಅನುಭವದಿಂದಲೂ ಕಂಡು ಬರುತ್ತದೆ. ಈಗ ಬೆಲೆ ಹೆಚ್ಚಳದ ವಿರುದ್ಧ ಪ್ರತಿಭಟನೆಯನ್ನು ಕಂಡು ಅದೇ ಇಂದಿರಾ ಗಾಂಧಿಯ ನಾಲಿಗೆಯಿಂದ ಎರಡು ತರಹ ಹೇಳಿಕೆಗಳು ಹೊರಬೀಳುತ್ತವೆ. ಜಗತ್ತಿನಾದ್ಯಂತ ಪ್ರತಿಯೊಂದು ದೇಶದಲ್ಲಿಯೂ ಬೆಲೆ ಹೆಚ್ಚಾಗುತ್ತಿದೆ. ನಮ್ಮ ದೇಶಕ್ಕೆ ಇದೊಂದು ಹೊಸ ಸಮಸ್ಯೆಯಾಗಿ ಉಳಿದಿಲ್ಲ. ಎರಡನೆಯವಾದ ಈ ರೀತಿಯ ಬೆಲೆ ಹೆಚ್ಚಳಕ್ಕೆ ಹಿಂದಿನ ಜನತಾ ಪಕ್ಷದ ಆಡಳಿತದ ಕಾರಣವಲ್ಲದೆ ನಾನಲ್ಲ. ಈ ಎರಡೂ ಹೇಳಿಕೆಗಳು ಎಷ್ಟು ಅಸಂಬದ್ಧವಾಗಿವೆ ಎಂಬುದು ಎಲ್ಲರಿಗೂ ಗೊತ್ತಿದೆ.

ಪ್ರತಿಯೊಂದು ದೇಶದಲ್ಲಿಯೂ ಬೆಲೆ ಏರುತ್ತಿದೆಂಬ ಹೇಳಿಕೆ ಅಪ್ಪಟ ಸುಳ್ಳು. ಬಂಡವಾಳ ದೇಶಗಳಲ್ಲಷ್ಟೇ ಬೆಲೆ ಹೆಚ್ಚಳವಾಗುತ್ತಿದೆ. ಸಮತಾವಾದಿ ದೇಶಗಳಲ್ಲಿ ಕಳೆದ 25 ವರ್ಷಗಳಿಂದಲೂ ಬೆಲೆಗಳು ಹೆಚ್ಚಿಲ್ಲ ಎಂಬ ಸಂಗತಿ ಇಂದಿರಾ ಗಾಂಧಿಗೂ ಗೊತ್ತು. ಸಂಯುಕ್ತ ರಾಷ್ಟ್ರ ಸಂಘದವರೂ, ಸ್ವತಂತ್ರ ಆರ್ಥಿಕ ತಜ್ಞರೂ ಇದನ್ನು ಸಮರ್ಥಿಸುತ್ತಾರೆ. ತಾನು ಸಮ್ಮಿಶ್ರ ಆರ್ಥಿಕ ನೀತಿಯನ್ನನುಸರಿಸುತ್ತಾ, ಬಂಡವಾಳಶಾಹಿ ದೇಶಗಳಿಗೂ, ಅವರ ನೀತಿಗೂ ಶರಣಾಗತವಾಗಿರುವುದರಿಂದ ತನ್ನ ತಪ್ಪು ನೀತಿಯನ್ನೂ, ಆರ್ಥಿಕ ಧೋರಣೆಯನ್ನೂ ಸಮರ್ಥಿಸಿಕೊಳ್ಳುವ ಸಲುವಾಗಿ "ಜಗತ್ತಿನಾದ್ಯಂತ ಬೆಲೆ ಹೆಚ್ಚಳ ನಡೆದಿದೆ. ನಮ್ಮ ದೇಶಕ್ಕಷ್ಟೇ ಅದು ಸೀಮಿತವಾಗಿಲ್ಲ. ಆದ್ದರಿಂದ ಇದೇನೂ ಚಳುವಳಿ ಹೂಡತಕ್ಕಂತ ಸಮಸ್ಯೆಯಲ್ಲ" ಎಂದು ಇಂದಿರಾಗಾಂಧಿ ಸರಳವಾಗಿಯೇ ಹೇಳಿಬಿಡುತ್ತಿದ್ದಾರೆ.

ಎನ್. ಕೆ. ಉಪಾಧ್ಯಾಯ

ಈ ಹಿಂದೆ ಕೇಂದ್ರದಲ್ಲಿ ಆಡಳಿತ ನಡೆಸಿರುವ ಜನತಾ ಸರಕಾರವೇ ಬೆಲೆ ಏರಿಕೆಗೆ ಕಾರಣವೆಂಬುದೂ ಸರಿಯಲ್ಲ. ಜನತಾ ಸರಕಾರ ಅಧಿಕಾರಕ್ಕೆ ಬಂದ ನಂತರ ಕೆಲವು ದಿವಸ ಅತ್ಯಾವಶ್ಯಕ ವಸ್ತುಗಳ ಮುಖ್ಯವಾಗಿ ಆಹಾರ ಧಾನ್ಯಗಳ, ಸಕ್ಕರೆ, ಎಣ್ಣೆಗಳ ಬೆಲೆ ಕಡಿಮೆಯಾಗಿತ್ತೆಂದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಜನತಾ ಪಾರ್ಟಿ ಮತ್ತು ಅದರ ಸರಕಾರ ಬಂಡವಾಳಶಾಹಿ ಆರ್ಥಿಕ ನೀತಿಯನ್ನೇ ಅನುಸರಿಸುತ್ತಾ ಬಂದಿರುವುದರಿಂದ ಕೆಲವು ತಿಂಗಳ ನಂತರ ಬೆಲೆಯಲ್ಲಿ, ಹೆಚ್ಚಳ ಪ್ರಾರಂಭವಾಯಿತು. ಗ್ರಾಹಕರ ವಸ್ತುಗಳ ಬೆಲೆ ಹೆಚ್ಚುತ್ತಿದ್ದಂತೆಯೇ ರೈತರು ಬೆಳೆದ ಬೆಳೆಗಳಿಗೆ ನ್ಯಾಯ ಬೆಲೆ ಸಿಗದೆ, ಉತ್ತರ ಪ್ರದೇಶದಂಥ ರಾಜ್ಯಗಳಲ್ಲಿ ಕಬ್ಬು ಮತ್ತಿನ್ನಿತರ ಬೆಳೆಗಳನ್ನು ರೈತರು ನಾಶ ಮಾಡುವ ಪರಿಸ್ಥಿತಿ ಕೂಡ ಉಂಟಾಗಿ ಹೆಚ್ಚು ಬೆಲೆಗಾಗಿ ರೈತರು ಹೋರಾಟ ನಡೆಸುವ ಪರಿಸ್ಥಿತಿ ಉಂಟಾಗಿತ್ತು. ಮೊರಾರ್ಜಿ ಸರಕಾರ ಬಿದ್ದು ಚರಣ ಸಿಂಗ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಶುರುವಾದ ಬೆಲೆಯೇರಿಕೆಯ ಓಘ ಇಂದಿರಾಗಾಂಧಿ ಅಧಿಕಾರಕ್ಕೆ ಬಂದ ನಂತರ ಇನ್ನಷ್ಟು ತೀವ್ರಗೊಂಡು ಸರ್ವಸಾಧಾರಣ ನಾಗರೀಕರ ಕೈಗೆ ಎಟುಕದಂತಾಗಿದೆ.

ಆದ್ದರಿಂದ 1977-79ರ ಬೆಲೆಯ ಸೂಚ್ಯಾಂಕಗಳನ್ನು 1980-83 ರ ಸೂಚ್ಯಾಂಕಗಳನ್ನು ತುಲನೆ ಮಾಡಿದಾಗ ಇಂದಿರಾ ಗಾಂಧಿಯವರ ಆರೋಪ ಹಸಿ ಸುಳ್ಳೆಂದು ಖಾತ್ರಿಯಾಗುತ್ತದೆ.

ಹೀಗಿದ್ದರೂ ಕೂಡ ಕಾಂಗ್ರೆಸ್ ಮತ್ತು ಜನತಾ ಪಕ್ಷದ ಆರ್ಥಿಕ ಧೋರಣೆ ಒಂದೇ ಎಂಬುದನ್ನು ಮರೆಯಬಾರದು. ಕೆಲವು ಸಂದರ್ಭಗಳಲ್ಲಿ ಬಂಡವಾಳ ವರ್ಗದ ಒಂದು ಗುಂಪು, ತನ್ನ ವರ್ಗಹಿತ ಹಾಗೆಯೇ ತನ್ನದೇ ಆದ ಸರಕಾರವನ್ನುಳಿಸುವ ದೃಷ್ಟಿಯಿಂದ ಈ ರೀತಿ ವರ್ತಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ಕೊನೆಯಲ್ಲಿ ಲಾಭದ ಮೂಲಕ ಬಂಡವಾಳವನ್ನಭಿವೃದ್ಧಿ ಮಾಡುವ ಉದ್ದೇಶವೇ ಮೇಲ್ಮೈಯಾಗಿ ಬೆಲೆಯೇರಿಕೆ ಸರಳ ರೀತಿಯಲ್ಲೇ ಮುಂದುವರಿಯುತ್ತದೆ.

ಕೆಲವು ಸಲ ಉತ್ತಮ ಮಳೆಯಿಂದಾಗಿ ಹೆಚ್ಚು ಆಹಾರ ಧಾನ್ಯ ಬೆಳೆದರೂ ಕೂಡ ಹೆಚ್ಚಿದ ಬೆಲೆಯಲ್ಲೇ ಬೆಲೆ ಉಳಿದು, ಇನ್ನೂ ಹೆಚ್ಚುವುದು ತಡೆಹಿಡಿಯಲ್ಪಡುತ್ತದೆ. ಹಾಗೆಯೇ ಅತಿ ಪ್ರಸರಣ, ಕೊರತೆಯ ಅಂದಾಜು ಪತ್ರಿಕೆಗಳೇ ಇದಕ್ಕೆ ಕಾರಣವಾಗುತ್ತವೆ. ಆದರೆ ಇಂದಿರಾ ಗಾಂಧಿಯವರು ಮುಂದೆ ಮಾಡಿರುವ ಕಾರಣಗಳು ಮಾತ್ರ ಸರಿಯಲ್ಲ.

ಬೆಲೆಯೇರಿಕೆಗೆ ಕಾರಣವೇನು ?

ಬಂಡವಾಳಶಾಹಿ ದೇಶಗಳಲ್ಲಿ ಒಂದೇ ಸಮನೆ ಬೆಲೆ ಹೆಚ್ಚುತ್ತಿರುವಾಗ, ಸಮತಾವಾದಿ ದೇಶಗಳಲ್ಲಿ ಬೆಲೆ ಹೆಚ್ಚಳವಾಗುತ್ತಿಲ್ಲ. ಇದಕ್ಕೆ ಕಾರಣವೇನು ? ಸಮತಾವಾದಿ ದೇಶಗಳಲ್ಲಿ ಉತ್ಪಾದನಾ ಸಾಧನಗಳೆಲ್ಲಾ ಕಾರ್ಖಾನೆ ಮತ್ತು ಭೂಮಿ ರಾಷ್ಟ್ರೀಕರಣವಾಗಿ, ಸಮಾಜದ ಸೊತ್ತಾಗಿದೆ. ಒಬ್ಬ ವ್ಯಕ್ತಿಯ, ಒಂದು ಗುಂಪಿನ, ಟ್ರಸ್ಟಿನ ಮಾಲಕತ್ವ ಅಲ್ಲಿಲ್ಲ. ಒಬ್ಬ ವ್ಯಕ್ತಿಯಾಗಲೀ, ಕಂಪೆನಿಯಾಗಲೀ, ಗುಂಪಾಗಲೀ ಉತ್ಪಾದನೆ ಸಾಧನೆಗಳ ಮಾಲಕತ್ವ ಪಡೆದು, ಆದರಿಂದ ಲಾಭ ಗಳಿಸುವಂತಿಲ್ಲ. ಆ ರೀತಿ ಗಳಿಸುವ ಲಾಭ ಇನ್ನೂ ಹೆಚ್ಚು ಲಾಭಗಳಿಕೆಗಾಗಿ ವಿನಿಯೋಗಿಸುವ ಪ್ರಶ್ನೆ ಕೂಡ ಇಲ್ಲ. ಹೆಚ್ಚು ಲಾಭ ಪಡೆಯಲು ಮನಬಂದಂತೆ ಬೆಲೆ ಹೆಚ್ಚಿಸುವಂತೆಯೂ ಇಲ್ಲ. ಯಾಕೆಂದರೆ ಅಲ್ಲಿ ಕಾರ್ಖಾನೆ - ಭೂಮಿ ಸಮಾಜದ ಸೊತ್ತು. ಆದರಿಂದ ಬರುವ ಲಾಭ ಇಡೀ ಸಮಾಜದ್ದು. ಆದರಿಂದ ಬರುವ ಲಾಭಕ್ಕೂ ಮಿತಿ ಇದೆ. ಖರ್ಚು. ಸಂಬಳ, ಸೌಲಭ್ಯಗಳು, ಬೆಳವಣಿಗೆಗಾಗಿ ಪಾಲು-ಮೊದಲಾದವುಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು ಬೆಲೆ ನಿರ್ಧರಿಸಲಾಗುವುದು. ಬರಗಾಲ-ಹೆಚ್ಚು ಮಳೆಯಿಂದಾಗಿ ಅಥವಾ ಮತ್ತಾವುದೇ ರೀತಿಯ ಪ್ರಕೃತಿಯ ಪ್ರಕೋಪದಿಂದ ಹಾನಿ ಉಂಟಾದರೆ ಉತ್ಪಾದನೆಯಲ್ಲಿ ಕಡಿತವಾದರೆ, ಆ ಕಾರಣದಿಂದಾಗಿ ಬೆಲೆ ಹೆಚ್ಚಳಕ್ಕೆ ಅವಕಾಶವಿಲ್ಲ. ಉತ್ಪಾದನೆ, ವಿತರಣೆಗಳೆಲ್ಲ ಸರ್ಕಾರದ ಜವಾಬ್ದಾರಿಯಾಗಿರುವುದರಿಂದ ಒಬ್ಬ ವ್ಯಕ್ತಿ ಅಥವಾ ಗುಂಪಿನ ಪ್ರಶ್ನೆ ಇರುವುದಿಲ್ಲ. ಖಾಸಗಿ ಮಾಲಕತ್ವ ಇದ್ದರೆ, ಲಾಭ, ಬೆಲೆ ಏರಿಕೆಗಳನ್ನೆದುರಿಸಬೇಕಾಗುತ್ತದೆ. ಬಂಡವಾಳಶಾಹಿ ದೇಶಗಳಲ್ಲಿ ಸಾಮಾಜೀಕರಣವಿಲ್ಲದೆ, ಗುತ್ತೇದಾರಿಗಳೂ, ಟ್ರಸ್ಟ್‌ಗಳೂ ಎಲ್ಲ ಉತ್ಪಾದನಾ ಸಾಧನಗಳ ಮಾಲಕರಾಗಿರುವುದರಿಂದ, ಉತ್ಪಾದನೆ, ವಿತರಣೆ, ಬೆಲೆಗಳನ್ನೆಲ್ಲ ಅವರೇ ನಿರ್ಧರಿಸುತ್ತಾರೆ. ಅಂಥ ಸಮಾಜದಲ್ಲಿ ಲಾಭವೇ ಪ್ರಾಧಾನ್ಯವಾಗಿರುವುದರಿಂದ ಯಾರ ಹಿಡಿತವಿಲ್ಲದೆ ನಿರಾತಂಕವಾಗಿ ಬೆಲೆ ಹೆಚ್ಚುತ್ತಲೇ ಮುಂದುವರಿಯುತ್ತದೆ. ನಮ್ಮ ದೇಶದಲ್ಲಿ ಕೂಡ ಬಂಡವಾಳಶಾಹಿ ಪದ್ಧತಿಯೇ ಜಾರಿಯಲ್ಲಿರುವುದರಿಂದ ಗುತ್ತೇದಾರಿಗಳೂ, ಹಿರಿಯ ಬಂಡವಾಲದಾರರೂ, ಥೋಕ ವ್ಯಾಪಾರಿಗಳೂ, ದೊಡ್ಡ ಭೂಮಾಲಕರೂ ಉತ್ಪಾದನೆಯನ್ನು ವಶಪಡಿಸಿಕೊಂಡಿರುವುದರಿಂದ, ಅವರೇ ತಮ್ಮ ಲಾಭಕ್ಕಾಗಿ ಬೆಲೆ ಹೆಚ್ಚಿಸುತ್ತಲೇ ಹೋಗುತ್ತಾರೆ. ಸರಕಾರ ಅದನ್ನು ನಿಯಂತ್ರಿಸುವುದರಲ್ಲಿ ಅಸಮರ್ಥತೆಯನ್ನು ತೋರಿಸುತ್ತದೆ. ಯಾಕೆಂದರೆ ಅಂಥ ಕ್ರಮದಿಂದ ತನಗೂ, ತನ್ನ ವರ್ಗಕ್ಕೂ ಅಪಾರ ಲಾಭವಿದೆ.

ಬೆಲೆಯೇರಿಕೆಯನ್ನು ತಡೆಗಟ್ಟಲು ಕ್ರಮ

ಬಂಡವಾಳಶಾಹಿ, ಆರ್ಥಿಕ ನೀತಿಯಿಂದಾಗಿ ಬೆಲೆ ಹೆಚ್ಚಳವು ಅಪಾಯಕಾರಿಯಾಗಿ ಮುಂದುವರಿಯುತ್ತಿದೆ. ಇದನ್ನು ತಡೆಹಿಡಿಯುವುದು, ಬೆಲೆ ಇಳಿಸುವುದು ಅತ್ಯಂತ ತುರ್ತು ಸಮಸ್ಯೆಯಾಗಿದೆ. ವಿಚಿತ್ರ ಸಂಗತಿ ಏನೆಂದರೆ ಒಂದು ಕಡೆ ಬೆಲೆ ಗಗನಕ್ಕೇರುತ್ತಿರುವಾಗ, ಮತ್ತೊಂದು ಕಡೆ ರೈತರು ನ್ಯಾಯ ಬೆಲೆಗಾಗಿ ಹೋರಾಡಬೇಕಾಗಿ ಬಂದಿದೆ. ಮಾರ್ಕೆಟ್ಟಿನಲ್ಲಿ ಬೆಲೆ ಹೆಚ್ಚಳವಾದರೂ ರೈತರಿಗೆ ನ್ಯಾಯ ಬೆಲೆ ಸಿಗುತ್ತಿಲ್ಲ. ಇದರಿಂದಾಗಿ ಗ್ರಾಹಕರಿಗೆ ಹೆಚ್ಚಿನ ಭಾರ ಬೀಳುತ್ತದೆ. ಹಾಗಾದರೆ ಇದರ ಲಾಭ ಯಾರಿಗೆ. ಥೋಕ ವ್ಯಾಪಾರಿಗಳಿಗೆ, ಶ್ರೀಮಂತ ರೈತರಿಗೆ. ಗುತ್ತೇದಾರಿ ವ್ಯಾಪಾರಿಗಳು ತಮ್ಮ ಸ್ವಂತ ಲಾಭಕ್ಕಾಗಿ ಬೆಲೆಗಳಲ್ಲಿ ಹೆಚ್ಚು ಕಡಿಮೆ ಮಾಡುತ್ತಾರೆ. ಮಾರ್ಕೆಟಿನಲ್ಲಿ ವಸ್ತುಗಳು ಇಲ್ಲದಂತೆ ಮಾಡುತ್ತಾರೆ.

ಈ ರೀತಿ ಜನರನ್ನು ಸುಲಿಯುತ್ತಿರುವ ಗುತ್ತೇದಾರಿ ಮತ್ತು ಥೋಕ ವ್ಯಾಪಾರಸ್ಥರಿಂದ ನಮ್ಮ ಜನತೆಯನ್ನು ರಕ್ಷಿಸಬೇಕಾದರೆ, ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದರೆ, ಕೇಂದ್ರ ಸರಕಾರ ಎಲ್ಲಾ ಥೋಕ ವ್ಯಾಪಾರವನ್ನು ತಾನೇ ವಶಪಡಿಸಿಕೊಂಡು, ಗುತ್ತೇದಾರಿಗಳ ಲಾಭದಾಸೆಯನ್ನು ಮೊಟಕುಗೊಳಿಸಬೇಕು. ಉತ್ಪಾದನೆಯ ಸಾಧನೆಗಳನ್ನೆಲ್ಲ ರಾಷ್ಟ್ರೀಕರಿಸಿದರೆ ಮಾತ್ರ ಸಾಧ್ಯ. ಬಂಡವಾಳಶಾಹಿ ಸಮಾಜದಲ್ಲಿ, ಬಂಡವಾಳಶಾಹಿ ವರ್ಗದ ಸರಕಾರದಿಂದ ಉತ್ಪಾದನೆಗಳ ರಾಷ್ಟ್ರೀಕರಣ ಮಾಡಿ...

(6ನೇ ಪುಟ ನೋಡಿ)

ಬಲ ಕಮ್ಯುನಿಸ್ಟರ ಸುಳ್ಳು ಆರೋಪಕ್ಕೆ ಉತ್ತರ:

'ನ್ಯೂ ಏಜ್' ಪತ್ರಿಕೆಯ ಸಂಪಾದಕರಿಗೊಂದು ಮಾರುತ್ತರ

ಹರ್‌ಕಿಷನ್‌ಸಿಂಗ್ ಸುರ್ಜೀತ್

ಅನು: **ನಾಗರಾಜ್ ಜಿ. ಎನ್.**

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷಗಳ ಸಂಬಂಧ ಪುನರಾರಂಭವಾದುದನ್ನು ಸಹಿಸದ ಬಲ ಕಮ್ಯುನಿಸ್ಟ್ ಪಕ್ಷದ ಇಂಗ್ಲಿಷ್ ಮುಖಪತ್ರವಾದ 'ನ್ಯೂ ಏಜ್' ಪತ್ರಿಕೆಯಲ್ಲಿ ಸಿ.ಪಿ.ಐ.(ಎಂ) ವಿರುದ್ಧ ಸಲ್ಲದ ಆರೋಪ ಹೊರಿಸಲಾಗಿದೆ.

ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ.) ನ ಸಹಕಾರ ಹೆಚ್ಚುತ್ತಿದೆ ಮತ್ತು ಐಕ್ಯ ಹೋರಾಟಗಳಿಗಾಗಿ ಪ್ರಯತ್ನಗಳು ನಡೆಯುತ್ತಿವೆ. ಅಮೆರಿಕಾ ಸಾಮ್ರಾಜ್ಯಶಾಹಿ ಯುದ್ಧಕೋರರ ವಿರುದ್ಧ ವಿಶ್ವಶಾಂತಿಯ ರಕ್ಷಣೆಗಾಗಿ, ವಿಭಜಕ ಶಕ್ತಿಗಳ ವಿರುದ್ಧ ದೇಶದ ಐಕ್ಯತೆಯ ಮತ್ತು ಭಾವೈಕ್ಯತೆಯ ರಕ್ಷಣೆಗಾಗಿ; ಕಾಂಗ್ರೆಸ್ (ಐ) ಆಡಳಿತದ ಜನವಿರೋಧಿ ನೀತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲಿನ ಆಕ್ರಮಣಕಾರಿ ನೀತಿಗಳ ವಿರುದ್ಧ ಈ ಹೋರಾಟಗಳು ಸಾಗಿವೆ. ಆದುದರಿಂದ ನಾವು ಸಿ. ಪಿ. ಐ. ಪಕ್ಷದ ಯಾವುದೇ ಬಹಿರಂಗ ಟೀಕೆಯನ್ನು ಮಾಡಹೋಗಿಲ್ಲ. ಆದರೆ ಇದರಿಂದ ಸೈದ್ಧಾಂತಿಕ ಮತ್ತಿತರ ವಿಷಯಗಳ ಬಗ್ಗೆ ವಾದ ಮಾಡುವ ಹಕ್ಕನ್ನು ತ್ಯಾಗಮಾಡಿದ್ದೇವೆಂದು ಅರ್ಥವಾಗುವುದಿಲ್ಲ. ಹೇಳುವುದಾದರೆ, ನಾವು ಯಾವಾಗಲೂ ಇಂಥ ಚರ್ಚೆಯನ್ನು ಸ್ವಾಗತಿಸಿದ್ದೇವೆ.

ನ್ಯೂ ಏಜ್ ಪತ್ರಿಕೆಯ ಸಿ.ಪಿ.ಸಿ., ಸಿ.ಪಿ.ಐ.(ಎಂ.) ಬಗೆಗಿನ ಲೇಖನದಲ್ಲಿ ಲೇಖಕ ದೂಷಣೆಗೆ ಮತ್ತು ಸಂಗತಿಗಳನ್ನು ವಿಕೃತಗೊಳಿಸುವ ಕೆಲಸಕ್ಕೆ ಕೈಹಾಕದಿದ್ದರೆ, ನಾವು ಅದನ್ನು ಕಡೆಗಣಿಸಬಹುದಿತ್ತು. ಆದರೆ ಲೇಖನದ ಆರಂಭದಲ್ಲಿಯೇ ಭಾರತ ಕಮ್ಯುನಿಸ್ಟ್ ಪಕ್ಷ ಎರಡಾಗಿ ಮಾರ್ಕ್ಸ್‌ವಾದಿ ಪಕ್ಷ ಮಾಡುವುದರಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷ ಮುಖ್ಯ ಪಾತ್ರ ವಹಿಸಿದೆ ಎಂಬ ಹಳೆಯ ಸವಕಲು ಕತೆಯನ್ನು ಮತ್ತೊಮ್ಮೆ ಹಾಕಿದ್ದಾರೆ. ಈ ರೀತಿ ಕೈಕಾಲುಗಳಿಲ್ಲದ ಕತೆಯಿಂದ ಯಾರಿಗಾದರು ವಂಚಿಸಬಹುದೆಂದು ಅವರು ಭಾವಿಸಿದ್ದಾರೇನೋ ?

ಪಕ್ಷದೊಳಗಿನ ಹೋರಾಟ

ಸಿ.ಪಿ.ಐ. ನಾಯಕತ್ವಕ್ಕೆ ಅದರ ಪತ್ರಾಗಾರದೊಳಗೇ ಸಿ. ಪಿ. ಐ. ನಲ್ಲಾದ ಒಡಕಿನ ಬಗ್ಗೆ ಮತ್ತು ಸಿ.ಪಿ.ಐ.(ಎಂ.) ಹುಟ್ಟಿದ್ದರ ಬಗೆಗೆ ಎಲ್ಲಾ ದಾಖಲೆಗಳು ಲಭ್ಯವಿದೆ. 1950ರ ಮಧ್ಯದಿಂದ 1964ರಲ್ಲಿ ಒಡಕಿನ ಕೊನೆಯ ವರೆವಿಗಿನ ಎಲ್ಲ ದಾಖಲೆಗಳನ್ನು ತಿರುವಿಹಾಕಲಿ. ಚೀನಾ ಈ ಒಡಕಿಗೆ ಪ್ರಮುಖ ಕಾರಣವೆಂದು ಹೇಳುವುದು ಚರಿತ್ರೆಯ ನಿರೂಪವೊ ಅಥವಾ ಸತ್ಯ ಸಂಗತಿಯೋ ಎಂಬುದು ಅವರಿಗೆ ಗೊತ್ತಾಗುತ್ತದೆ

ಮೊದಲು ಭಾರತ ಕಮ್ಯುನಿಸ್ಟ್ ಪಕ್ಷದ ಪಾಲ್ಘಾಟ್ ಸಮ್ಮೇಳನ ತಯಾರಿಗಾಗಿ ಪ್ರಕಟಿಸಿದ ಚರ್ಚೆಗಳನ್ನು ಪರಿಶೀಲಿಸಲಿ. ಹಾಗೆಯೇ ಮೂರರಲ್ಲೊಂದು ಭಾಗದ ಪ್ರತಿನಿಧಿಗಳ ಬೆಂಬಲ ಪಡೆದ ಬದಲಿ ಗೊತ್ತುವಳಿಗಳನ್ನು ನೋಡಲಿ. ಆ ಚರ್ಚೆ ನಡೆದದ್ದು ಯಾವ ವಿಷಯದಲ್ಲಿ ? ಒಂದು ಕಡೆ ಕಾಂಗ್ರೆಸ್ಸಿನ ಜೊತೆಜೊತೆಯಲ್ಲಿಯೇ ರಾಷ್ಟ್ರೀಯ ಸರಕಾರ ರಚನೆಗಾಗಿ ವಾದಿಸುತ್ತಿದ್ದರು, ಮತ್ತೊಂದು ಕಡೆ ಈಗಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿರುವವರು ಆಡಳಿತ ಪಕ್ಷಕ್ಕೆ ಬೆಂಬಲ ಕೊಡುವುದರ ವಿರುದ್ಧ ಹೋರಾಡಿದವರು. ಈ ಚರ್ಚೆ ಚೀನಾ ಕಮ್ಯುನಿಸ್ಟ್ ಪಕ್ಷದ ಕೈವಾಡದಿಂದುಂಟಾದದ್ದೇ ? ಸಿ. ಪಿ. ಐ. ನಾಯಕರು ಇತಿಹಾಸದ ಸಂಗತಿಗಳನ್ನು ಮರೆತಿರುವಂತೆ ಕಾಣಿಸುತ್ತಿರುವುದರಿಂದ ಅವರಿಗೆ ಮತ್ತೊಮ್ಮೆ ನೆನಪಿಸ ಬಯಸುತ್ತೇನೆ:—

1956ರಲ್ಲಿ, ನಾಲ್ಕನೇ ಸಮ್ಮೇಳನ ನಡೆಯುವಾಗ ಚೀನಾ ಮತ್ತು ಸೋವಿಯತ್ ಒಕ್ಕೂಟದ ಎರಡೂ ಕಮ್ಯೂನಿಸ್ಟ್ ಪಕ್ಷಗಳು ನಮ್ಮ ದೇಶದ ಆಳುವ ವರ್ಗಗಳ ಬಗ್ಗೆ ಏಕಾಭಿಪ್ರಾಯವನ್ನು ಹೊಂದಿದ್ದವೆಂಬುದನ್ನು ಮತ್ತು ಈ ಸಂಗತಿ ರಶ್ಯದ ಕಮ್ಯೂನಿಸ್ಟ್ ಪಾರ್ಟಿಯ 20 ನೇ ಸಮ್ಮೇಳನದ ದಾಖಲೆಗಳಲ್ಲಿ ಮತ್ತು ಚೀನಾ ಕಮ್ಯುನಿಸ್ಟ್ ಪಾರ್ಟಿಯ ಎಂಟನೇ ಸಮ್ಮೇಳನದ ದಾಖಲೆಗಳಲ್ಲಿ ಅಡಕವಾಗಿದೆ ಎಂಬುದನ್ನೂ ನೆನಪಿಸ ಬಯಸುತ್ತೇನೆ.

ಪರಿಷ್ಕರಣವಾದೀ ಕಾರ್ಯ ನೀತಿ

ಸಿನ್ಹಾರವರು ಮತ್ತೊಂದು ಸಂಗತಿಯನ್ನೂ ಮರೆತಿರುವುದರಿಂದ ಅವರಿಗೆ ಅದರ ನೆನಪನ್ನೂ ಮಾಡಿಕೊಡುತ್ತೇನೆ. ಮಾಸ್ಕೋದ 'ನ್ಯೂ ಟೈಮ್ಸ್'ನಲ್ಲಿನ ರೂಬಿನ್ ಸ್ಟೈನ್‌ರವರ ಲೇಖನದ ಸಲಹೆಯಂತೆ ಜವಹರಲಾಲ್ ನೆಹರೂವರ ನಾಯಕತ್ವದಲ್ಲಿ ಸಮಾಜವಾದವನ್ನು ತರುವ ಸಾಧ್ಯತೆಗಳ ಬಗ್ಗೆ ಕೇಂದ್ರ ಸಮಿತಿಯಲ್ಲಿ ಈ ಜನರು (ಕಾಂಗ್ರೆಸ್ ಬೆಂಬಲಿಗರು) ಚರ್ಚೆಗೆ ತಂದರು. ಭಾರತದಂತಹ ದೇಶದಲ್ಲಿ ಸಮಾಜವಾದವನ್ನು ತರಲು ಕಾರ್ಮಿಕರ ನಾಯಕತ್ವವಾಗಲೀ, ಶ್ರಮಿಕ ವರ್ಗದ ಸರ್ವಾಧಿಕಾರವಾಗಲೀ ಅನವಶ್ಯವೆಂದರು. ಆಗಿನ ಕೇಂದ್ರ ಸಮಿತಿ ಬಹುಮತದಿಂದ ಈ ಅಭಿಪ್ರಾಯವನ್ನು ತಿರಸ್ಕರಿಸಿತು ಮತ್ತು ಕೇಂದ್ರ ಸಮಿತಿಯ ಉತ್ತರ ಆಗಿನ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜೋಯ್ ಘೋಷ್‌ರವರ ಹೆಸರಿನಲ್ಲಿ 'ನ್ಯೂ ಟೈಮ್ಸ್'ನಲ್ಲಿ ಪ್ರಕಟವಾಯಿತು.

ಆಗ ಪಕ್ಷದೊಳಗಿನ ಚರ್ಚೆಗಳ ಮತ್ತಷ್ಟು ವಿವರಗಳನ್ನಿಲ್ಲಿ ಕೊಡ ಬಯಸುತ್ತೇನೆ. ಕೇರಳದಲ್ಲಿ 1957 ರ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ ಮತ್ತು ಅವರಿಂದ ಬೆಂಬಲಿತವಾದ ಐದು ಪಕ್ಷೇತರರು ಬಹುಮತ ಪಡೆದರು. ಆ ಕ್ಷಣವೇ ಈಗ ಸಿಪಿಐನಲ್ಲಿರುವ ಜನ ಪ್ರಜಾಸತ್ತೆಯ ಬಗ್ಗೆ ಅತಿ ನಿಕೃಷ್ಟ ಪರಿಷ್ಕರಣವಾದೀ ಭ್ರಮೆಗಳಿಗೆ ತುತ್ತಾದರು ಮತ್ತು ಇಡೀ ದೇಶಕ್ಕೆ ಕೇರಳ ಮಾದರಿಯನ್ನನುಸರಿಸಲು ಕರೆಕೊಟ್ಟರು.

ನಂತರ, 1958ರಲ್ಲಿ ಸಿಪಿಐಯ ಅಮೃತಸರದ ಐದನೇ (ವಿಶೇಷ) ಅಧಿವೇಶನದಲ್ಲಿ, ಇದೇ ಜನರು ನೆಹರೂ ಮತ್ತು ಕಾಂಗ್ರೆಸ್ ಸರಕಾರಕ್ಕೆ ಬೆಂಬಲ ನೀಡಲು ಅವರ ಹಿಂದೆ ನಿಲ್ಲಬೇಕೆಂದರು. ಇದು ಸ್ವತಂತ್ರ ಪಕ್ಷದ ನಾಯಕತ್ವದ ಬಲಪ್ರತಿಗಾಮಿಗಳ ವಿರುದ್ಧ ಹೋರಾಡಲು ಅವಶ್ಯವೆಂದು ನೆಪ ಹೇಳಿದರು. ಇದೇ ವಾದವನ್ನು ನಾವು 1964ರ ಒಡಕಿನ ನಂತರ ಮತ್ತೆ ಮತ್ತೆ ಕೇಳಿದೆವು ಎಂಬುದನ್ನು ನಂತರ ಚರ್ಚಿಸೋಣ, ಆದರೆ ಸಮ್ಮೇಳನದಲ್ಲಿ ಬಲಪ್ರತಿಗಾಮಿಗಳನ್ನೂ ಮತ್ತು ಕಾಂಗ್ರೆಸ್ ಸರಕಾರವನ್ನು ಏಕಕಾಲದಲ್ಲಿಯೇ ವಿರೋಧಿಸಬೇಕೆಂಬ ರಾಜೀ ತೀರ್ಮಾನಕ್ಕೆ ಬಂದರು.

ವಿಜಯವಾಡ ಸಮ್ಮೇಳನ ೧೯೬೧

ಈ ಹಿನ್ನೆಲೆಯಲ್ಲಿ ಎರಡು ಧೋರಣೆಗಳ ನಡುವೆ ಅರ್ಧ ದಶಕದ ಹೋರಾಟದ ಹಿನ್ನೆಲೆಯಲ್ಲಿ, ಆಳುವ ವರ್ಗಗಳ ಹಿಂಬಾಲಕರಾಗಬೇಕೆಂಬ ಧೋರಣೆ ಮತ್ತು ಈ ಧೋರಣೆಯ ವಿರುದ್ಧದ ಹೋರಾಟದ ಹಿನ್ನೆಲೆಯಲ್ಲಿ ವಿಜಯವಾಡ ಆರನೇ ಸಮ್ಮೇಳನ ಸೇರಿತು. ಈ ಸಮ್ಮೇಳನ ಮಾಸ್ಕೊದಲ್ಲಿ ನಡೆದ 81 ಕಮ್ಯುನಿಸ್ಟ್ ಮತ್ತು ಶ್ರಮಿಕರ ಪಕ್ಷಗಳ ಅಧಿವೇಶನದ ನಂತರ ಎಂಬುದನ್ನೂ ಗಮನದಲ್ಲಿಡಬೇಕು.

ಈ ಅಧಿವೇಶನದಲ್ಲಿ ಎರಡು ಕಾರ್ಯ ನೀತಿಗಳು ಎರಡು ಕರಡು ಕಾರ್ಯಕ್ರಮಗಳು ಮತ್ತು ಎರಡು ರಾಜಕೀಯ ನಿರ್ಣಯಗಳು ಮಂಡಿಸಲ್ಪಟ್ಟವು ಮತ್ತು ಪಕ್ಷ ಪೂರ್ತಿಯಾಗಿ ಇಬ್ಬಾಗವಾಯಿತೆನ್ನುವಂತಾಯಿತು. ಅತಿಸಾಹಸದಿಂದ ಸಮ್ಮೇಳನದಲ್ಲಿಯೇ ಪಕ್ಷ ಇಬ್ಬಾಗವಾಗುವುದನ್ನು ತಪ್ಪಿಸಲಾಯಿತು. ಆದರೆ ಈ ತೇಪೆ ಬಹಳ ಕಾಲ ನಿಲ್ಲಲಿಲ್ಲ. ಕಾರಣ ಸ್ಪಷ್ಟ. ಇಲ್ಲಿಯವರೆಗೂ ಪರಿಷ್ಕರಣವಾದೀ ಧೋರಣೆಯನ್ನೇ ತಳೆದ ಜನ ವಿಶ್ವ ಕಮ್ಯುನಿಸ್ಟ್ ದಾಖಲೆಗಳಿಗೆ (1957 ಮತ್ತು 1960 ರವು) ಪರಿಷ್ಕರಣವಾದಿ ಅರ್ಥವನ್ನೇ ಮಾಡಿದರು. ಕಾಂಗ್ರೆಸ್ ಪಕ್ಷದೊಡನೆ ಮಿಶ್ರ ಸರಕಾರ ರಚಿಸುವ ಮತ್ತು ಅವರ 'ರಾಷ್ಟ್ರೀಯ ಪ್ರಜಾಸತ್ತೆ'ಯ ಕಡೆಗೆ ಹೋಗುವ ಕಾರ್ಯ ನೀತಿಯನ್ನು ಮುಂದಿಟ್ಟರು.

ಎರಡು ವಿರುದ್ಧ ಕಾರ್ಯನೀತಿಗಳ ನಡುವಿನ–ಒಂದು ಪರಿಷ್ಕರಣವಾದಿ ಮತ್ತು ವರ್ಗ ಸಹಕಾರದ ಮತ್ತೊಂದು ವರ್ಗ ಹೋರಾಟದ–ಕಾರ್ಯನೀತಿಗಳ ನಡುವಿನ ಈ ಹೋರಾಟ ಸಿಪಿಐನ ಒಡಕಿಗೆ ಕಾರಣವಾಯಿತು. ಸೋವಿಯತ್ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷಗಳೆರಡೂ ಭಾರತದ ಪರಿಸ್ಥಿತಿಯ ಬಗ್ಗೆ ಮತ್ತು ಆಳುವ ವರ್ಗಗಳ ಬಗ್ಗೆ ಒಂದೇ ಅಭಿಪ್ರಾಯವನ್ನು ಹೊಂದಿದ್ದ ಸಮಯದಲ್ಲಿಯೇ ವಿಭಜನೆಯಾಯಿತು. ಆದುದರಿಂದ ಚೀನಾ ಕಮ್ಯುನಿಸ್ಟ ಪಕ್ಷವನ್ನು ಈ ಒಡಕಿಗೆ ಕಾರಣ ಎಂದು ಆರೋಪಿಸುವುದು ಸಂಗತಿಗಳ ವಿಕೃತಿ, ಚರಿತ್ರೆಯ ಅಕ್ಷಮ್ಯ ವಿರೂಪ ಮತ್ತು ನೇರದೂಷಣೆಯಾಗಿದೆ. ಪಕ್ಷದ ವಿಭಜನೆಯ ನಂತರದ ಸಂಗತಿಗಳನ್ನು ಸಿಪಿಐ ನಾಯಕರ ಗಮನಕ್ಕೆ ತರಬೇಕಾಗಿದೆ.

1967ರಲ್ಲಿ ಚುನಾವಣೆಯಾಗಿ ಕಾಂಗ್ರೆಸ್‌ನ ಏಕಸ್ವಾಮ್ಯ ಮುರಿದುಬಿದ್ದು ಒಂಭತ್ತು ರಾಜ್ಯಗಳಲ್ಲಿ ಆ ಪಕ್ಷ ಸೋತ ತಕ್ಷಣ ಭಾರತೀಯ ಕಮ್ಯುನಿಸ್ಟ್ ಪಕ್ಷದ ಹಿಂದಿನ ನೀತಿ ತಿರುಗು ಮುರುಗಾಯಿತೆಂಬುದನ್ನು ಇಂದರ್ ದೀಪ ಸಿನ್ಹಾ ಅಲ್ಲಗಳೆಯುವರೇ ? ಪ್ರತಿಗಾಮಿಗಳ ವಿರುದ್ಧ ಹೋರಾಡಲು ಕಾಂಗ್ರೆಸ್ಸನ್ನು ಬೆಂಬಲಿಸುವ ನೀತಿಯಿಂದ ಹಿಂದೆ ಸರಿದು ಅದೇ ಪ್ರತಿಗಾಮಿ ಪಕ್ಷಗಳಿಂದ ಕಿಕ್ಕಿರಿದಿದ್ದ ಸಮ್ಮಿಶ್ರ ಸರಕಾರಗಳನ್ನು ಸೇರಲಿಲ್ಲವೆ ? ಇದಕ್ಕೆ ಪ್ರತಿಯಾಗಿ ಮಾರ್ಕ್ಸ್‌ವಾದೀ ಪಕ್ಷ, ಎಲ್ಲಿ ಎಡ ಶಕ್ತಿಗಳು ಅಥವಾ ತನ್ನ ಸ್ವಂತ ಶಕ್ತಿ ಎಲ್ಲಿ ಪ್ರಬಲವಾಗಿರುವುದೊ ಅಂತಹ ಪ. ಬಂಗಾಳ, ಕೇರಳದಲ್ಲಿ ಮಾತ್ರ ಸರಕಾರ ರಚಿಸಿತು ಮತ್ತು ಉಳಿದೆಲ್ಲ ಕಡೆ ಮಂತ್ರಿ ಪದವಿಯ ನೀಡಿಕೆಯನ್ನೂ ತಿರಸ್ಕರಿಸಿತು.

ಪಾಟ್ನಾ ಸಮ್ಮೇಳನದಲ್ಲಿ ಸಿಪಿಐನ ಸ್ವಯಂ ವಿಮರ್ಶೆ

'ನ್ಯೂ ಏಜ್' ಪತ್ರಿಕೆಯ ಸಂಪಾದಕರು ಅವರ ಪಕ್ಷದ ಪಟ್ನಾ ಸಮ್ಮೇಳನದಲ್ಲಿ ಮಾಡಿದ ಸ್ವಯಂ ವಿಮರ್ಶೆಯನ್ನು ಮರೆತಿರುವರೆ ? ನಾವು ಅವರದೇ ಸ್ವಯಂ ವಿಮರ್ಶೆಯಿಂದ ಪುಟಗಟ್ಟಲೇ ಉಲ್ಲೇಖಿಸಬಹುದು. ಆದರೆ ಸ್ಥಳದ ಅಭಾವದಿಂದ ಕೇವಲ ಕೆಲವೇ ಅಂಶಗಳಿಗೆ ಅವರ ಗಮನವನ್ನು ಸೆಳೆಯಬಯಸುತ್ತೇವೆ.

ಅವರ ವರದಿ ಹೀಗೆ ಹೇಳುತ್ತದೆ: "ಈ ಸಂದರ್ಭದಲ್ಲಿ ಪಕ್ಷದೊಳಗೆ ಸಮಯಸಾಧಕತನ ಗೋಚರವಾಗುತ್ತಿದೆ. ಜನರಲ್ಲಿರುವ ಕಾಂಗ್ರೆಸ್ ವಿರೋಧ ನಮ್ಮ ದೃಷ್ಟಿಕೋನವನ್ನು ಮಸುಕು ಮಾಡಿದೆ. ಜನಸಂಘ ಮತ್ತು ಸ್ವತಂತ್ರ ಪಕ್ಷದ ವಿರುದ್ಧದ ಹೋರಾಟವನ್ನು ಮರೆತಿದ್ದೇವೆ. ನಮ್ಮ ಕಾರ್ಯನೀತಿಯಲ್ಲಿ ಮತ್ತು ಘೋಷಣೆಗಳಲ್ಲಿ ಏನು ಹೇಳಿದ್ದೇವೆಯೊ ಅದರಂತೆ ಯಾವುದೇ ಹೋರಾಟವನ್ನು ಬೆಳೆಸಿಲ್ಲ. ಮತ್ತು ಸಂಘಟಿತ ಬಲ ಪಕ್ಷಗಳಾದ ಜನಸಂಘ ಮತ್ತು ಸ್ವತಂತ್ರ ಪಕ್ಷದ ನೀತಿಗಳನ್ನು ಕೂಡ ಹೊರಗೆಳೆದಿಲ್ಲ. ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಈ ಬಲಪಕ್ಷಗಳಿಂದುಂಟಾಗಬಹುದಾದ ಅಪಾಯಗಳನ್ನು ಕಡೆಗಣಿಸುತ್ತಿದ್ದೇವೆ."

ಇದಕ್ಕೂ ತೀವ್ರವಾದ ಸ್ವಯಂ ಟೀಕೆ ಬೇಕಾದರೆ ಅದು ಸಿ. ಪಿ. ಐ. ಜನಸಂಘದೊಂದಿಗೆ ಸಮ್ಮಿಶ್ರ ಸರಕಾರದಲ್ಲಿರುವಾಗ್ಲೇ ನಡೆದ ರಾಂಚಿ ಮತೀಯ ಗಲಭೆಗಳ ವಿಷಯದಲ್ಲಿ ಹೀಗೆ ಹೇಳಿದೆ "ಚುನಾವಣೆಗಳ ನಂತರ ಗಲಭೆಗಳ ಒಂದು ಸರಣಿಯೇ ಆಯಿತು. ರಾಂಚಿಯಲ್ಲಾದ ಗಲಭೆ, ವಿಶೇಷವಾಗಿ ದೇಶ ಎದುರಿಸುತ್ತಿರುವ ಆಕ್ರಮಣಕಾರೀ ಜಾತೀಯತೆಯ ಅಪಾಯದ ಮುನ್ಸೂಚಿಯಾಯಿತು. ಅದೂ ಚುನಾವಣೆಗಳಲ್ಲಿ ಕಂಡು ಬಂದ ಉತ್ಸಾಹದ ಕೆಲವೇ ದಿನಗಳಲ್ಲಿ ಈ ಗಲಭೆಗಳ ಸಮಯದಲ್ಲಿ ಬಿಹಾರ ಸರಕಾರ ಅವನ್ನೆದುರಿಸಲು ಸನ್ನದ್ಧವಾಗಲಿಲ್ಲ ಮತ್ತು ಈ ಗಲಭೆಗಳನ್ನು ನಿಯಂತ್ರಿಸುವಲ್ಲಿ ಅದರ ಪಾತ್ರ ನಿರೀಕ್ಷಿತ ಮಟ್ಟಕ್ಕಿರಲಿಲ್ಲ."

"ಪಕ್ಷದ ಕೇಂದ್ರ ಬಿಹಾರದ ಗಲಭೆಗಳಿಗೆ ಸರಿಯಾಗಿ ಪ್ರತಿಕ್ರಿಯೆ ವ್ಯಕ್ತಮಾಡಲಿಲ್ಲ. ಕೇಂದ್ರ ನಾಯಕತ್ವದಿಂದ ಯಾರೂ ರಾಂಚಿಗೆ ಭೇಟಿ ಕೊಡಲಿಲ್ಲ. ಇದು ಸಂಪೂರ್ಣ ದೋಷಯುಕ್ತ ನಡೆವಳಿಕೆ." "ಈ ಗಲಭೆಗಳ ಅನುಭವದಿಂದ ಜಾತೀಯತೆಯ ಅಪಾಯಗಳ ಸಂಪೂರ್ಣ ಅರಿವು ನಮಗೆ ಇರಲಿಲ್ಲ. ನಾವು ಈ ಸವಾಲನ್ನು (ಜಾತೀಯತೆಯ) ಎದುರಿಸುವಷ್ಟು ಚುರುಕಾಗಿ ಮತ್ತು ಸನ್ನದ್ಧವಾಗಿ ಇರಲಿಲ್ಲ."

ಈ ಪ್ರಸಂಗಗಳು ಉಂಟಾದ ಕಾರಣವೇನು ? ಇದು ಪೂರ್ತಿಯಾಗಿ ಸಮಯ ಸಾಧಕತನದ ಪಾಪಫಲಗಳಲ್ಲವೆ ?

(ಮುಂದುವರಿಯುವುದು)

ಸಿ. ಐ. ಟಿ. ಯು. ಬೇಡಿಕೆ

ಬೀಗಮುದ್ರೆ, ರಿಟ್ರೆಂಚ್‌ಮೆಂಟ್ ತಡೆಯಲು ಗುತ್ತೇದಾರಿ ಕಂಪೆನಿಗಳನ್ನು ರಾಷ್ಟ್ರೀಕರಿಸಬೇಕು

ಸಿ.ಐ.ಟಿ.ಯು. ನ ಕಾರ್ಯದರ್ಶಿ ಮಂಡಳಿ ನವದೆಹಲಿಯಲ್ಲಿ ಜೂನ್ 25ರಂದು ಕಾಂ. ಬಿ. ಟಿ. ರಣದಿವೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸದ್ಯದ ಪರಿಸ್ಥಿತಿಯನ್ನು ವಿಮರ್ಶಿಸಿತು. ಸಮರ್ ಮುಖರ್ಜಿ, ಬಾಲಾನಂದನ್, ಮೊಹಮ್ಮದ್ ಇಸ್ಮಾಯಿಲ್, ಹರಸಹಾಯ್ ಸಿಂಗ್, ನೃಸಿಂಗ ಚಕ್ರವರ್ತಿ, ಎಂ. ಎಂ. ಲಾರೆನ್ಸ್ ಹಾಗೂ ಪಿ.ಕೆ. ಗಾಂಗೂಲಿ ಭಾಗವಹಿಸಿದ ಈ ಸಭೆ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು.

ಗುತ್ತೇದಾರಿ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು ಸದ್ಯದ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ದಾಟಿಸುವುದಕ್ಕಾಗಿ ಕಾರ್ಮಿಕ ವರ್ಗದ ಮೇಲೆ ಹೇರುತ್ತಿರುವ ರಿಟ್ರೆಂಚ್‌ಮೆಂಟ್, ಬೀಗಮುದ್ರೆ, ಕಾರ್ಖಾನೆ ಮುಚ್ಚುವುದು ಇತ್ಯಾದಿ ಹೆಚ್ಚುತ್ತಿರುವುದರ ಬಗ್ಗೆ ಕಾರ್ಯದರ್ಶಿ ಮಂಡಲಿ ಆತಂಕ ವ್ಯಕ್ತಪಡಿಸಿದೆ. ಆದ್ದರಿಂದ ಸಾರ್ವಜನಿಕ ಹಣಕಾಸು ಸಂಸ್ಥೆಗಳು ಸಾಕಷ್ಟು ಬಂಡವಾಳ ಹೊಂದಿರುವ ಗುತ್ತೇದಾರಿ ಗುಂಪುಗಳನ್ನು ರಾಷ್ಟ್ರೀಕರಿಸಬೇಕೆಂದು ಅದು ಒತ್ತಾಯಿಸಿದೆ. ಈ ಹಿಂದೆ ಸರಕಾರ ವಹಿಸಿಕೊಂಡ ಕೈಗಾರಿಕಾ ಘಟಕಗಳನ್ನು ಹಿಂದಿರುಗಿಸಲಾಗುತ್ತಿದೆ ಎಂದು ಇತ್ತೀಚೆಗೆ ಕೇಳಬಂದಿರುವ ವಿಚಾರಗಳನ್ನು ಅದು ಖಂಡಿಸಿದೆ. ಉತ್ಪಾದನೆಯ ಬದಲಾವಣೆ ಅಥವಾ ವಿಸ್ತರಣೆಯ ಮೂಲಕ ಆ ಘಟಕಗಳು ಪುನಃ ಚೇತರಿಸಿಕೊಳ್ಳಲು ಶಕ್ಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಇಂತಹ ಘಟಕಗಳನ್ನು ಅದೇ ರೀತಿಯ ಉತ್ಪಾದನೆಯಲ್ಲಿ ತೊಡಗಿರುವ ಇತರ ಕೈಗಾರಿಕೆಗಳೊಂದಿಗೆ ವಿಲೀನಗೊಳಿಸಬೇಕೆಂದು ಸಿ.ಐ.ಟಿ.ಯು. ಉಪಾಧ್ಯಕ್ಷರೂ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೂ ಆದ ಕಾಂ. ಜ್ಯೋತಿ ಬಸು ಮಂಡಿಸಿರುವ ಸಲಹೆಗೆ ಸಭೆ ಬೆಂಬಲ ವ್ಯಕ್ತಪಡಿಸಿತು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿರುವ ರೀತಿಯ ನಿರುದ್ಯೋಗ ಪರಿಹಾರ ನಮ್ಮಲ್ಲಿನ್ನೂ ಇಲ್ಲವಾದ್ದರಿಂದ ಕಾರ್ಮಿಕರ ಸಂಖ್ಯೆಯಲ್ಲಿ ಖೋತಾ, ಬೀಗಮುದ್ರೆ ಹಾಗೂ ಕೈಗಾರಿಕೆಯನ್ನು ಮುಚ್ಚುವುದು ಇತ್ಯಾದಿ ಕ್ರಮಗಳ ಮೇಲೆ ಪ್ರತಿಬಂಧನ ಹೇರಬೇಕೆಂದು ನಿರ್ಣಯ ಒತ್ತಾಯಿಸಿದೆ. ಈಗಾಗಲೇ ಇತರ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಜಂಟಿಯಾಗಿ ಈ ಕುರಿತು ಕಾರ್ಯಕ್ರಮ ಆರಂಭಿಸಿರುವ ಸಿ. ಐ. ಟಿ. ಯು. ನ ಪಶ್ಚಿಮ ಬಂಗಾಳ ಹಾಗೂ ಕೇರಳ ಘಟಕಗಳನ್ನು ಅಭಿನಂದಿಸಿರುವ ನಿರ್ಣಯ ಆಗಸ್ಟ್ 21 ರಂದು ನವದೆಹಲಿಯಲ್ಲಿ ನಡೆಸಬೇಕೆಂದು ಯೋಚಿಸಿರುವ ಎರಡನೇ ರಾಷ್ಟ್ರೀಯ ಕಾರ್ಮಿಕ ಸಂಘಗಳ ಸಮಾವೇಶದ ಒಂದು ಅಂಗವಾಗಿ ಈ ವಿಷಯವನ್ನು ರಾಷ್ಟ್ರೀಯ ಆಂದೋಲನ ಸಮಿತಿ ಎತ್ತಿಕೊಳ್ಳುವುದೆಂದೂ, ದೇಶಾದ್ಯಂತ ಅದಕ್ಕಾಗಿ ಬಲಿಷ್ಟ ಚಳುವಳಿ ಸಂಘಟಿಸುವುದೆಂದೂ ಆಶಿಸಿದೆ.

ಸಭೆ ಇನ್ನೊಂದು ನಿರ್ಣಯ ಅಂಗೀಕರಿಸಿ ಸೆಣಬು ಕೈಗಾರಿಕೆಯ ಕಾರ್ಮಿಕರು ಹಾಗೂ ಸೆಣಬು ಬೆಳೆಗಾರರ ಹಿತಾಸಕ್ತಿ ಕಾಪಾಡಲು ಸೆಣಬು ಕೈಗಾರಿಕೆಯನ್ನು ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸಲು ಜೂನ್ 29 ರಂದು ಪಶ್ಚಿಮ ಬಂಗಾಳ ವಿಧಾನ ಸಭೆಯ ಪರವಾಗಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯನ್ನು ಭೇಟಿಯಾಗಲಿದ್ದ ಪಶ್ಚಿಮ ಬಂಗಾಳದ ಎಲ್ಲಾ ಪಕ್ಷಗಳ ಪ್ರತಿನಿಧಿಮಂಡಲವನ್ನು ಸ್ವಾಗತಿಸಿದೆ. ಅಖಿಲ ಭಾರತ ಸೆಣಬು ಕಾರ್ಮಿಕರ ಫೆಡರೇಶನ್ ಆಗಸ್ಟ್ 1' ರಂದು 'ಅಖಿಲ ಭಾರತ ಬೇಡಿಕೆ ದಿನ' ಆಚರಿಸಬೇಕೆಂದು ನೀಡಿದ ಕರೆಗೆ ಸಭೆ ಬೆಂಬಲ ಸೂಚಿಸಿ ಅದನ್ನು ಸಂಯೋಗ್ಯ ರೀತಿಯಲ್ಲಿ ಆಚರಿಸಲು ತಯಾರಿ ನಡೆಸಬೇಕೆಂದು ಎಲ್ಲಾ ಘಟಕಗಳಿಗೆ ನಿರ್ದೇಶನವಿತ್ತಿದೆ.

ಕೋಟಾ ಹಾಗೂ ಕಾನಪುರದಲ್ಲಿ ಜೆ. ಕೆ. ಸಿಂಥೆಟಿಕ್ಸ್‌ನ್ನು ಮುಚ್ಚಿರುವುದು ಹಾಗೂ ರಿಟ್ರೆಂಚ್‌ಮೆಂಟ್ ವಿರುದ್ಧ ಕಾರ್ಮಿಕರ ಚಳವಳಿಯ ವರದಿಯನ್ನು ಸಭೆ ಆಲಿಸಿತು ಹಾಗೂ ಈ ಎರಡು ಕಂಪೆನಿಗಳನ್ನು ತಕ್ಷಣ ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸಿತು; ದೃಢ ಹೋರಾಟ ನಡೆಸುತ್ತಿರುವ ಕಾರ್ಮಿಕರನ್ನು ಅಭಿನಂದಿಸಿ ಅವರಿಗೆ ಸಾಧ್ಯವಿದ್ದ ಎಲ್ಲಾ ಸಹಾಯ ಒದಗಿಸುವುದಾಗಿ ಭರವಸೆ ನೀಡಿತು. ಸದ್ಯದಲ್ಲೇ ಜೆ. ಕೆ. ಕಂಪೆನಿಗಳ ಎಲ್ಲಾ ಕಾರ್ಮಿಕ ಸಂಘಗಳ ಸಮ್ಮೇಳನ ನಡೆಸಲಿರುವ ವಿಷಯವನ್ನು ಸಭೆ ಗಮನಿಸಿತು.

ಇನ್ನೊಂದು ನಿರ್ಣಯ ಅಂಗೀಕರಿಸಿ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಹಾಗೂ ಭಾರತೀಯ ಖೇರ್ ಮಜ್ದೂರ್ ಯೂನಿಯನ್ ಜಂಟಿಯಾಗಿ ಜುಲೈ 15 ರಂದು ಕೃಷಿ ಕಾರ್ಮಿಕರ ಒಂದು ದಿನದ ಮುಷ್ಕರಕ್ಕೆ ನೀಡಿದ ಕರೆಗೆ ಕಾರ್ಯದರ್ಶಿ ಮಂಡಲಿ ಬೆಂಬಲ ಸೂಚಿಸಿತು. ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಎಲ್ಲ ಅಂಶಗಳನ್ನೂ ಒಳಗೊಂಡ ಒಂದು ಕೇಂದ್ರೀಯ ಶಾಸನ ರೂಪಿಸಬೇಕೆಂದು ಒತ್ತಾಯಿಸಲು ಈ ಮುಷ್ಕರಕ್ಕೆ ಕರೆ ನೀಡಲಾಗಿದೆ, ಈ ಮುಷ್ಕರ ಯಶಸ್ವಿಯಾಗುವಂತೆ ನೆರವು ನೀಡಬೇಕೆಂದು ಸಿ. ಐ. ಟಿ. ಯು.ಗೆ ಸೇರಿದ ಎಲ್ಲಾ ಯೂನಿಯನ್‌ಗಳಿಗೆ ಮಂಡಲಿ ನಿರ್ದೇಶನ ನೀಡಿದೆ.

ಡಿಸೆಂಬರ್ 1 ರಂದು ಯುರೋಪಿನಲ್ಲಿ ಕ್ರೂಸರ್ ಹಾಗೂ ಪರ್ಶಿಂಗ್ ಕ್ಷಿಪಣಿಗಳನ್ನು ಸ್ಥಾಪಿಸಲಿರುವ ಯೋಜನೆಯ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 1 ನ್ನು "ಶಾಂತಿ ದಿನ"ವನ್ನಾಗಿ ಆಚರಿಸಬೇಕೆಂಬ ಕಾರ್ಮಿಕ ಸಂಘಗಳ ಜಾಗತಿಕ ಒಕ್ಕೂಟ [WFTU]ದ ಮನವಿಯನ್ನು ಕಾರ್ಯದರ್ಶಿ ಮಂಡಲಿ ಪರಿಶೀಲಿಸಿ ಸೆಪ್ಟೆಂಬರ್ 1 ರಂದು 'ಶಾಂತಿ ದಿನ' ಆಚರಿಸಲು ಕಾರ್ಯಕ್ರಮ ರೂಪಿಸಲು ಸಿಐಟಿಯು ರಾಜ್ಯ ಸಮಿತಿಗಳಿಗೆ ಕರೆ ನೀಡಿದೆ.

ಕಾರ್ಮಿಕ ಸಂಘಗಳು (ತಿದ್ದುಪಡಿ) ಮಸೂದೆಯ ಕಲಮುವಾರು ಚರ್ಚೆ ನಡೆಸಿ ಕಾರ್ಮಿಕ ಸಂಘಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ, ಸಮರಶೀಲ ಕಾರ್ಮಿಕ ಸಂಘಗಳನ್ನು ವಿಚ್ಛಿದ್ರಗೊಳಿಸಬಯಸುವ ಎಲ್ಲಾ ಕಲಮುಗಳನ್ನು ವಿರೋಧಿಸಲು ಕಾರ್ಯದರ್ಶಿ ಮಂಡಲಿ ನಿರ್ಧರಿಸಿತು. ಜುಲೈ 6 ರಂದು ಕೇಂದ್ರ ಕಾರ್ಮಿಕ ಮಂತ್ರಿಯವರು ಕರೆದಿರುವ ಸಭೆಯಲ್ಲಿ ಕಾರ್ಯದರ್ಶಿಗಳ ಒಂದು ತಂಡ ಭಾಗವಹಿಸಿ ಸಿ. ಐ. ಟಿ. ಯು. ನ ಅಭಿಪ್ರಾಯಗಳನ್ನು ಮಂಡಿಸಬೇಕೆಂದು ನಿರ್ಧರಿಸಲಾಯಿತು.

ಸ್ವದೇಶೀ ಕಾಟನ್ ಮಿಲ್ಸ್‌ನ್ನು ಡಿನೋಟಿಫೈ ಮಾಡುವ ವಿರುದ್ಧ ಜುಲೈ 3 ರಂದು ಕಾನ್‌ಪುರದಲ್ಲಿ ನಡೆಯಲಿದ್ದ ಸಮಾವೇಶದಲ್ಲಿ ಕಾಂ. ನೃಸಿಂಗ ಚಕ್ರವರ್ತಿ ಭಾಗವಹಿಸಬೇಕೆಂದು ಕಾರ್ಯದರ್ಶಿ ಮಂಡಲಿ ನಿರ್ಧರಿಸಿತು.

ಇವಲ್ಲದೆ ವಿವಿಧ ಸಮಿತಿಗಳಿಗೆ ನೇಮಕಾತಿಯೂ ಕೂಡಿದಂತೆ ಹಲವು ಸಂಘಟನಾತ್ಮಕ ನಿರ್ಧಾರಗಳನ್ನೂ ಸಭೆ ಕೈಗೊಂಡಿತು.

ಚುನಾವಣಾ ಆಯೋಗಕ್ಕೆ ಕೇಂದ್ರ ಸಮಿತಿ ಉತ್ತರ :

ಕಾಂಗ್ರೆಸ್ (ಐ)ಗೆ ನೆರವಾಗುವ ಬದಲು ಆಯೋಗ ಅನುಪಾತಿಕ ಪ್ರಾತಿನಿಧ್ಯ ಅಂಗೀಕರಿಸಲಿ

ಭಾರತದ ಚುನಾವಣಾ ಆಯೋಗ ಎಲ್ಲಾ ರಾಜಕೀಯ ಪಕ್ಷಗಳಿಗೆ ಮನ್ನಣೆ ಕುರಿತು ಕಳಿಸಿದ ಟಿಪ್ಪಣಿಗೆ ಉತ್ತರವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಬರೆದಿರುವ ಪತ್ರದ ಒಕ್ಕಣೆ ಈ ರೀತಿಯಿದೆ:

ಭಾರತದ ಚುನಾವಣಾ ಆಯೋಗ
ಅಶೋಕ ರಸ್ತೆ, ನವದೆಹಲಿ-110001

ಮಾನ್ಯರೇ,

ದಿನಾಂಕ ಜೂನ್ 7ರ ರಾಜಕೀಯ ಪಕ್ಷಗಳ ಮನ್ನಣೆ ಕುರಿತಾದ ನಿಮ್ಮ ಟಿಪ್ಪಣಿಗೆ ಸಂಬಂಧಿಸಿದಂತೆ ಈ ಪತ್ರ. ಟಿಪ್ಪಣಿಯಲ್ಲಿ ಇತ್ತ ಸೂಚನೆಗಳ ಬಗ್ಗೆ ನಮ್ಮ ಪಕ್ಷದ ಅಭಿಪ್ರಾಯಗಳನ್ನು ಈ ಕೆಳಗೆ ಕೊಡುತ್ತಿದ್ದೇವೆ.

1. ಟಿಪ್ಪಣಿಯಲ್ಲಿ ಹೇಳಿರುವ "ನಾಯಿಕೊಡೆಗಳಂತೆ ಪಕ್ಷಗಳು ಹುಟ್ಟಿಕೊಂಡಿರುವ" ಅಂಶ ಭಾರತದ ಚುನಾವಣಾ ವ್ಯವಸ್ಥೆಯಿಂದ ನಿವಾರಿಸಬೇಕಾದ ಕೆಡುಕು ಎಂದು ನಾವು ಭಾವಿಸುವುದಿಲ್ಲ. ನಿವಾರಿಸಬೇಕಾಗಿರುವ ಕೆಡುಕೆಂದರೆ ಸರ್ವರೀತಿಯಲ್ಲೂ ಆರೋಗ್ಯಕರ ವಿರೋಧದ ಬೆಳವಣಿಗೆಯನ್ನು ನಿರುತ್ಸಾಹಗೊಳಿಸುವ ಆಳುವ ಪಕ್ಷದ ಅಧಿಕಾರದ ಗುತ್ತೇದಾರಿಕೆಯೇ.

2. ಬ್ರಿಟಿಶರಿಂದ ನಾವು ವಾರಸಿನಲ್ಲಿ ಪಡೆದ ಚುನಾವಣಾ ವ್ಯವಸ್ಥೆಯಲ್ಲಿ ಚುನಾವಣೆಯೊಂದರಲ್ಲಿ ಅಲ್ಪ ಮತ ಗಳಿಸಿದ ಪಕ್ಷವೂ "ಭಾರೀ ಗೆಲುವು" ಪಡೆಯಲು ಅಂದರೆ ಬಹುಮತದ ಸ್ಥಾನಗಳನ್ನು ಪಡೆಯಲು ಅವಕಾಶ ನೀಡುತ್ತದೆ. ವಾಸ್ತವ ಸಂಗತಿಯೇನೆಂದರೆ 1952ರ ಸಾರ್ವತ್ರಿಕ ಚುನಾವಣೆಗಳಿಂದ ಹಿಡಿದು ಲೋಕಸಭೆಗೆ ಹಾಗೂ ಹೆಚ್ಚಿನ ರಾಜ್ಯ ವಿಧಾನಸಭೆಗಳಿಗೆ ನಡೆದಿರುವ ಚುನಾವಣೆಗಳಲ್ಲೆಲ್ಲಾ ಕಾಂಗ್ರೆಸ್ ಪಕ್ಷ ಅಲ್ಪಮತದ ಆಧಾರದ ಮೇಲೇನೇ ಬಹುಮತದ ಪಕ್ಷವಾಗಿ ಆರಿಸಿಬಂದಿರುವುದು. ಈಗಿನ ಕೇಂದ್ರ ಸರಕಾರ ಚುನಾಯಿತಗೊಂಡಿದ್ದು 45%ಕ್ಕೂ ಕಡಿಮೆ ಮತಗಳಿಂದ. ಆದರೆ ಅದು ಪಡೆದಿರುವ ಸ್ಥಾನಗಳ ಸಂಖ್ಯೆ ಮೂರರಲ್ಲಿ ಎರಡರಷ್ಟು.

3. ಇದರಿಂದಾಗಿ ವಿರೋಧ ಪಕ್ಷಗಳು ತಮ್ಮತಮ್ಮಲ್ಲೇ ಒಟ್ಟುಗೂಡುವುದು ಅಗತ್ಯವಾಗುತ್ತದೆ. ಕಾಂಗ್ರೆಸ್ ಕೂಡಾ ನಿಜವಾಗಿಯೂ ಸೋಲಬೇಕಾದ ಅಥವಾ ಸೋಲುವ ಅಪಾಯವಿರುವಲ್ಲಿ ಇದೇ ವಿಧಾನವನ್ನು ಅನುಸರಿಸಬೇಕಾಗಿ ಬಂದಿದೆ. ವಿರೋಧಪಕ್ಷಗಳು ಮೊತ್ತಮೊದಲ ಸಾರ್ವತ್ರಿಕ ಚುನಾವಣೆಗಳಿಂದಲೇ ಈ ಪ್ರಕ್ರಿಯೆ ಆರಂಭಿಸಿದ್ದರೆ, ಕಾಂಗ್ರೆಸ್ ಪಕ್ಷ 1957ರಲ್ಲಿ ಕೇರಳದಲ್ಲಿ ಸೋಲನುಭವಿಸಿದ ನಂತರ ಆ ವಿಧಾನವನ್ನನುಸರಿಸಿತು.

4. ಈ ಬೆಳವಣಿಗೆಗಳ ರಾಜಕೀಯ ಹಿನ್ನೆಲೆಯೇನೆಂದರೆ, 1947ರಲ್ಲಿ ಅಧಿಕಾರ ಬ್ರಿಟಿಶರಿಂದ ಕಾಂಗ್ರೆಸ್ ಪಕ್ಷಕ್ಕೆ ಹಸ್ತಾಂತರಗೊಂಡ ಮೇಲೆ ಆ ಪಕ್ಷ ಶೀಘ್ರವಾಗಿ ಜನತೆಯ ಮೇಲೆ ತನ್ನ ಹಿಡಿತವನ್ನು ಹಾಗೂ ಅಧಿಕಾರವನ್ನು ಕಳೆದುಕೊಳ್ಳಲಾರಂಭಿಸಿದರೂ, ಅದಕ್ಕೆ ಸರಿಹೋಲುವ ಶಕ್ತಿಯ ಯಾವೊಂದು ರಾಜಕೀಯ ಪಕ್ಷವೂ ಅಖಿಲಭಾರತ ಮಟ್ಟದಲ್ಲಿ ಮೂಡಿಬರಲಿಲ್ಲ. ಆದ್ದರಿಂದ ವಿರೋಧ ಪಕ್ಷಗಳ ಬೆಳವಣಿಗೆಗೆ ಅವಕಾಶ ಹೇಗೆ ಮಾಡಿಕೊಡಬಹುದು ಎಂಬುದರ ಬಗ್ಗೆ ಆಯೋಗ ಪರಿಶೀಲನೆ ನಡೆಸಬೇಕು. ಆದರೆ ಆಯೋಗ ಇದಕ್ಕೆ ಏಕದಂ ವಿರುದ್ಧ ದಿಕ್ಕಿನಲ್ಲಿ ಯೋಚಿಸುತ್ತಿದೆ ಎಂದು ಹೇಳಲು ನಮಗೆ ಖೇದವೆನಿಸುತ್ತದೆ. ಅದು ವಿರೋಧ ಪಕ್ಷಗಳ ಸಂಖ್ಯೆಯನ್ನು ಕಡಿತಗೊಳಿಸುವ ನಿಲುವು ತಳೆದಿದೆ. ರಾಜಕೀಯ ಪಕ್ಷಗಳ ಸಂಖ್ಯೆಯನ್ನು ನಿರ್ಧರಿಸುವುದು ಆಡಳಿತದ ಅಥವಾ ಆಯೋಗದ ಕೆಲಸವಲ್ಲ. ಜನತೆ ಅದನ್ನು ನಿರ್ಧರಿಸುವವರು.

5. ಸದ್ಯದ ಚುನಾವಣಾ ಪದ್ಧತಿಯಲ್ಲಿ ನಾವು ಸೂಚಿಸಿರುವ ಏಕಮಾತ್ರ ಬದಲಾವಣೆಯೆಂದರೆ ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ ಅಂಗೀಕರಿಸಬೇಕು ಎಂಬುದು. ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಅಲ್ಪಮತದಿಂದ ಅಧಿಕಾರದ ಗದ್ದುಗೆ ಪಡೆಯಲು ಸಾಧ್ಯವಾಗುವ ಪಕ್ಷಗಳು ಅನುಭೋಗಿಸುವ ಅಧಿಕಾರದ ಗುತ್ತೇದಾರಿಕೆಯನ್ನು ಇದು ಮುರಿಯುತ್ತದೆ. ಪ್ರತಿಯೊಂದು ಪಕ್ಷವೂ, ಅದು ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ತನ್ನದೇ ಆಧಾರದ ಮೇಲೆ ಮತದಾರರ ಬಳಿ ಸಾರಿ ತಾನು ಗಳಿಸಿದ ಮತದ ಅನುಪಾತದಲ್ಲಿ ಸ್ಥಾನಗಳನ್ನು ಪಡೆಯುವಂತೆ ಈ ಪದ್ಧತಿ ವಿಧಿಸುತ್ತದೆ. ಒಬ್ಬ ವ್ಯಕ್ತಿಗಿಂತ ಹೆಚ್ಚಾಗಿ ಒಂದು ಪಕ್ಷದ ಪರವಾಗಿ ಮತಗಳು ದಾಖಲಾಗುವುದರಿಂದ, ಯಾವುದೇ ಕಾರಣದಿಂದ ಪಕ್ಷಕ್ಕೆ ರಾಜೀನಾಮೆ ನೀಡಿದರೆ ಆ ಪಕ್ಷದ ಪರವಾಗಿ ಗಳಿಸಿದ ಸ್ಥಾನ ತಂತಾನೇ ಕಳಕೊಳ್ಳುವಂತಾಗುತ್ತದೆ. ಇದು ಆಳುವ ಕಾಂಗ್ರೆಸ್ (ಐ) ನ ಸಂಕುಚಿತ ಪಕ್ಷಪಾತ ಪೂರ್ಣ ಹಿತಾಸಕ್ತಿಗಳ ವಿರುದ್ಧವಾಗಿದೆ ಎಂಬುದನ್ನು ಬಿಟ್ಟರೆ ಈ ಪದ್ಧತಿಯನ್ನು ಅಂಗೀಕರಿಸದಿರಲು ಬೇರೆ ಯಾವ ಕಾರಣವೂ ಇಲ್ಲ.

6. ನಮ್ಮ ಪಕ್ಷವೂ ಸೇರಿದಂತೆ ಹಲವು ವಿರೋಧ ಪಕ್ಷಗಳು ಅನುಪಾತಿಕ ಪ್ರಾತಿನಿಧ್ಯ ಪದ್ಧತಿ ಆರಂಭಿಸಬೇಕೆಂದು ಹಿಂದಿನಿಂದ ಸೂಚಿಸುತ್ತಾ ಬಂದಿದ್ದು, ಈಗಲೂ ಅದನ್ನೇ ಸೂಚಿಸುತ್ತಿದ್ದರೂ ಇದು ಗಂಭೀರ ಪರಿಶೀಲನೆಗೆ ಅರ್ಹ ಎಂದು ಆಯೋಗಕ್ಕೆ ಅನಿಸಿಲ್ಲ ಎಂದು ಗಮನಿಸಲು ನಮಗೆ ಖೇದವೆನಿಸುತ್ತದೆ. ಚುನಾವಣಾ ವ್ಯವಸ್ಥೆಯಲ್ಲಿ ಈ ಮೂಲಭೂತ ಬದಲಾವಣೆಯನ್ನು ಅಂಗೀಕರಿಸದೆ ಇದ್ದಲ್ಲಿ (ಆಯೋಗದ ನಿಲುವು ಅದೇ ಇದ್ದಂತೆ ಕಾಣುತ್ತದೆ) ರಾಜಕೀಯ ಪಕ್ಷಗಳ ಮನ್ನಣೆಗೆ ಸಂಬಂಧಿಸಿದಂತೆ ಈಗ ಇರುವ ಕಾನೂನು ಕಟ್ಟಳೆಗಳನ್ನು ಮುಂದುವರಿಸಬೇಕೆಂಬುದು ನಮ್ಮ ಅಭಿಪ್ರಾಯ. ಆಯೋಗದ ಟಿಪ್ಪಣಿಯಲ್ಲಿ ಸೂಚಿಸಿದ ರೀತಿಯಲ್ಲಿ ರಾಜಕೀಯ ಪಕ್ಷಗಳ ಮನ್ನಣೆಯ ಸದ್ಯದ ಪದ್ಧತಿಯಲ್ಲಿ ಏನಾದರೂ ಬದಲಾವಣೆ ಮಾಡಿದರೆ ಅದು ಆಳುವ ಕಾಂಗ್ರೆಸ್ (ಐ) ಗೆ ಮಾತ್ರ ಸಹಾಯಕವಾಗುತ್ತದೆ. ಮತ್ತು ಅದು ಎಲ್ಲಾ ವಿರೋಧ ಪಕ್ಷಗಳಿಗೆ ಪ್ರತಿಕೂಲವಾಗುತ್ತದೆ.

ತುಮಕೂರು :

ಸಿ. ಪಿ. ಐ. (ಎಂ) ಕಾರ್ಯಕರ್ತರಿಂದ ಪ್ರತಿಭಟನೆ



ತುಮಕೂರು ನಗರದ ಬಾಳನಕಟ್ಟೆ ಪ್ರದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಫೀಸಿನ ಕಟ್ಟಡಕ್ಕಾಗಿ ಸುಮಾರು ನಾಲ್ಕು ವರ್ಷಗಳ ಹಿಂದೆ ತುಮಕೂರು ನಗರಸಭೆಯವರು ಅವಿರೋಧವಾಗಿ 60'×80'ರ ನಿವೇಶನವನ್ನು ಕೊಡಬೇಕೆಂದು ನಿರ್ಣಯಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟು ಮಂಜೂರಾತಿ ಪಡೆದು ನಿಗದಿ ಬೆಲೆ 550 ರೂಗಳನ್ನು ಕಟ್ಟಿಸಿಕೊಂಡು ಹಲವಾರು ವರ್ಷಗಳು ಕಳೆದಿದ್ದರೂ ನಿವೇಶನವನ್ನು ಪಾರ್ಟಿಯ ಸುಭರ್ದಿವಿಗೆ ಕೊಟ್ಟಿರಲಿಲ್ಲ.

ಇದೇ ಜಾಗದಲ್ಲಿ ರಂಗ ಮಂದಿರವನ್ನು ನಿರ್ಮಿಸಲು ಸರ್ಕಾರದ ನಕಾಷೆ ತಯಾರಿಸಲಾಗಿದ್ದು ಆ ನಕಾಷೆಯಲ್ಲಿ ಪಾರ್ಟಿ ಆಫೀಸಿಗೆ ಕೊಟ್ಟ ಜಾಗವನ್ನು ಗುರ್ತಿಸದೆ ಪಾರ್ಟಿ ನಿವೇಷನವನ್ನು ನಕಾಷೆಯಲ್ಲಿ ಸೇರಿಸಲಾಗಿದೆ ಎಂದು, ಈ ರೀತಿ ಮಾಡುವುದರಿಂದ ಹಿಂದಿನ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದಂತಾಗಿದೆ ಎಂದೂ ಮುಖ್ಯಮಂತ್ರಿಗಳಿಗೂ ಸಂಭಂದಪಟ್ಟವರಿಗೂ ಪಾರ್ಟಿ ವತಿಯಿಂದ ಪತ್ರ ಬರೆಯಲಾಗಿತ್ತು.

ಇಷ್ಟಾದರೂ ಇದನ್ನು ಲೆಕ್ಕಿಸದೆ ತಾ। 14-7-83 ರಂದು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಂದ ಈ ಪ್ರದೇಶದಲ್ಲಿ ರಂಗ ಮಂದಿರದ ಶಂಕುಸ್ಥಾಪನಾ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ಇದರ ವಿರುದ್ಧ ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರೂ ಬೆಂಬಲಿಗರು ಕೆಂಬಾವುಟಗಳನ್ನು ಹಿಡಿದು ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮಾಡಲು ಬಂದಾಗ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ವ್ಯಕ್ತ ಪಡಿಸಿದರು ಮುಖ್ಯಮಂತ್ರಿಗಳು ಪ್ರದರ್ಶನಕಾರರ ಬಳಿಗೆ ಬಂದು ವಿಷಯವನ್ನು ಪೂರ್ತಿಯಾಗಿ ಕೇಳಿ ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ಪಾರ್ಟಿಗೆ ಕೊಟ್ಟಿರುವ ನಿವೇಶನವನ್ನು ತೆರವು ಮಾಡಿಸಿ ಸಂಭರ್ದಿ ಕೊಡಿಸುವಂತೆ ಆಜ್ಞೆ ಮಾಡಿದರು.

ಪ್ರದರ್ಶನದಲ್ಲಿ ಪಾರ್ಟಿ ಮುಖಂಡರುಗಳಾದ ಕಾಂ. ಕೆ.ಆರ್. ನಾಯಕ್, ಕಾಂ. ಹೆಚ್. ಸಿ. ಚಿನ್ನಪ್ಪ, ಕಾಂ. ಗೋವಿಂದರಾಜು, ಕಾಂ. ಷದೂದ್ ಖಾನ್, ಕಾಂ.ಉಮ್ಮರ್‌ಖಾನ್,ಕಾಂ. ರವೀಂದ್ರ ನಾಯಕ್, ಕಾಂ. ವಿ. ಚಿಕ್ಕವೀರಯ್ಯ, ಕಾಂ. ಹಾಜರಾಂಬಿ ಮುಂದಾಳತ್ವ ವಹಿಸಿದ್ದರು.

ಗೋಕಾಕ್ ವರದಿ ಕುರಿತು ಸಿ.ಪಿ.ಐ.(ಎಂ) ನಿಲುವು

'ಗೋಕಾಕ್ ವರದಿ' ಜಾರಿ ಮಾಡುವ ವಿಷಯದಲ್ಲಿ ನಡೆಯುತ್ತಿರುವ ಚಳವಳಿಯ ಬಗ್ಗೆ ಈ ಕೆಳಗಿನ ಸ್ಪಷ್ಟ ನಿಲುವೆಯನ್ನು ಪಕ್ಷವು ಕೈಗೊಂಡಿದೆ.

"ಆಡಳಿತ ಭಾಷೆ ಕನ್ನಡ ಭಾಷೆಯಾಗಿರುವಾಗ ಸರಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಕನಿಷ್ಠ ಕನ್ನಡ ಕಲಿತಿರಬೇಕಾದ್ದು ನ್ಯಾಯವೇ. ಆದರೆ, ಈ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡುವಾಗ ಇದ್ದಕ್ಕಿದ್ದಂತೆ ಈ ನಿಬಂಧನೆ ಹೇರುವುದರಿಂದ ರಾಜ್ಯದ ಅಲ್ಪಸಂಖ್ಯಾತರಿಗೆ ಹಾಗೂ ಕನ್ನಡ ಮಾತೃಭಾಷೆಯಲ್ಲದವರಿಗೆ ನ್ಯಾಯ ದೊರಕಲಾರದು. ಅಂತಹವರನ್ನು ಉದ್ಯೋಗಕ್ಕೆ ನೇಮಕ ಮಾಡಿದನಂತರ, ನಿರ್ದಿಷ್ಟ ಅವಧಿ ಗೊತ್ತುಪಡಿಸಿ ಕನ್ನಡ ಕಲಿಯಲು ಅವಕಾಶ ಮಾಡಿಕೊಡಬೇಕು."

"ಕನ್ನಡವನ್ನು ಎಲ್ಲಾ ಹಂತಗಳಲ್ಲಿ ವಿಸ್ತೃತವಾಗಿ ಬಳಸುವಂತೆ ತುರ್ತು ಕ್ರಮಗಳನ್ನು ವಹಿಸುವುದು ಅತ್ಯಾವಶ್ಯಕವಿದೆ. ಆದರೆ ಗೋಕಾಕ್ ವರದಿ ಇದ್ದಕ್ಕಿದ್ದಂತೆ ಜಾರಿಗೆ ಬರಬೇಕೆಂದು ಕೆಲವರು ಚಳವಳಿಯ ಮಾರ್ಗವನ್ನು ಹಿಡಿದಿರುವುದು ಸರಿಯಲ್ಲ. ಗೋಕಾಕ್ ವರದಿಯಲ್ಲಿ ಅಲ್ಪಸಂಖ್ಯಾತ ಭಾಷಿಕರ ಹಿತಾಸಕ್ತಿಗಳನ್ನು ಕಡೆಗಣಿಸಿರುವ ಅಂಶವೂ ಇರುವುದರಿಂದ, ಇದು ಇತ್ತೀಚೆಗೆ ಜನತೆಯಲ್ಲಿ ಬೆಳೆದು ಬಂದಿರುವ ಐಕ್ಯತೆಯನ್ನು ಛಿದ್ರಗೊಳಿಸಬಹುದಾಗಿದೆ."

'ಈ ಆಧಾರದಲ್ಲಿ ಮತೀಯ ನಿಲುವನ್ನು ಪ್ರಚಾರಗೊಳಿಸಬೇಕು.'

ಬೆಲೆಯೇರಿಕೆ ವಿರುದ್ಧ ಹೋರಾಟ ನಡೆಯಲಿ

(3ನೇ ಪುಟದಿಂದ)
ದರೂ ಕೂಡ ಬಂಡವಾಳಶಾಹಿ ಪದ್ಧತಿಯೇ ಮುಂದುವರಿಯುತ್ತಿರುವ ತನಕವೂ ಅದರ ಪ್ರಯೋಜನ ಗ್ರಾಹಕರಿಗೆ ಸಿಗಲು ಸಾಧ್ಯವಿಲ್ಲ. ಆದರೂ ಕೂಡ ಜನತೆಯ ಆಂದೋಲನ ಪ್ರಬಲವಾಗಿ, ಸಾಮೂಹಿಕ ಸಂಘಟನೆಗಳೂ ಜನತಾ ಪ್ರತಿನಿಧಿಗಳೂ ವಿತರಣೆಯಲ್ಲಿ ಪಾಲ್ಗೊಂಡರೆ ಸ್ವಲ್ಪ ಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ. ಕೇಂದ್ರ ಸರಕಾರ ದೇಶಾದ್ಯಂತ ಅತ್ಯಾವಶ್ಯಕ ವಸ್ತುಗಳ ಆಹಾರ ಧಾನ್ಯವನ್ನು ಒಂದು ನಿಶ್ಚಿತ, ಸರಿಸಮಾನ ಮತ್ತು ಸರಕಾರ 'ಸಬ್‌ಸಿಡೈಸ್' ಮಾಡಿ ಮಾರಾಟ ಮಾಡಬೇಕು.

ಇದರ ಸಲುವಾಗಿ 1) ಬತ್ತ, ಗೋಧಿ ಮತ್ತಿನ್ನಿತರ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ತೆತ್ತು ರೈತರಿಂದಲೇ ನೇರವಾಗಿ ಸರಕಾರ ಖರೀದಿ ಮಾಡಬೇಕು. 2) ಸಾರ್ವಜನಿಕ ವಿತರಣೆಯ ವ್ಯವಸ್ಥೆಯನ್ನು ದೇಶಾದ್ಯಂತ ಸ್ಥಾಪಿಸುವುದು. ಇದರ ಸಲುವಾಗಿ ಸರಕಾರ, ಸಹಕಾರಿ ಸಂಘಗಳಿಂದ ನಡೆಸಲ್ಪಡುವ ಅಗ್ಗದರದ ಅಂಡಿಗಳನ್ನು ಸ್ಥಾಪಿಸಬೇಕು. ಇದರ ಸಲುವಾಗಿ ಸಣ್ಣ ಅಂಗಡಿಗಾರರ ಸೇವೆಯನ್ನು ಉಪಯೋಗಿಸಿಕೊಳ್ಳಬಹುದು. 3) ಈ ಅಂಗಡಿಗಳ ಮೂಲಕ ಅಕ್ಕಿ, ಗೋಧಿ, ಉಂಡೆಣ್ಣ, ಸಕ್ಕರೆ, ಚಿಮಿಣಿ ಎಣ್ಣೆ ಬಟ್ಟೆ, ಬೇಳೆಕಟ್ಟಿಗೆಗಳನ್ನು ಎಲ್ಲ ಕಡೆಯಲ್ಲಿಯೂ ಒಂದೇ ತರದ ನಿರ್ದಿಷ್ಟ ಬೆಲೆಯಲ್ಲಿ ಮಾರಾಟ ಮಾಡುವುದು. ಅದಕ್ಕೆ ಸಾಕಾಗುವಷ್ಟು ಸಾಮಾನುಗಳನ್ನು ಒದಗಿಸುವುದು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲದ ಎಡರಂಗ ಸರಕಾರ ತಮ್ಮ ರಾಜ್ಯದಲ್ಲಿ ಈ ತರದ ವಿತರಣಾ ಪದ್ಧತಿಯನ್ನು ಜಾರಿಯಲ್ಲಿ ತಂದಿದೆ. ಆದರೆ ಕೇಂದ್ರ ಸರಕಾರ ಸಾಕಷ್ಟು ಆಹಾರ ಧಾನ್ಯ ಒದಗಿಸಲು ವಿಫಲವಾಗಿರುವುದರಿಂದ ಸ್ವಲ್ಪ ಕಷ್ಟ ಎದುರಿಸಬೇಕಾಗಿದೆ. ದೇಶಾದ್ಯಂತ ಇಂಥ ವಿತರಣಾ ವ್ಯವಸ್ಥೆ ಸುವ್ಯವಸ್ಥಿತವಾಗಿ ಜಾರಿಯಲ್ಲಿ ತರಬೇಕು ಎಂದು 1977ರಿಂದಲೂ ಮಾರ್ಕ್ಸಿಸ್ಟ್ ಮುಖಂಡ, ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿಬಸು ಅವರು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ.

ಕೇರಳದಲ್ಲಿ ಅಧಿಕಾರದಲ್ಲಿದ್ದ ಇ. ಕೆ. ನಯನಾರ ಅವರ ಎಡ ಮತ್ತು ಪ್ರಜಾಪ್ರಭುತ್ವ ಸರಕಾರ ತಾನು ಅಧಿಕಾರದಲ್ಲಿದ್ದಾಗ ಎರಡು ಓಣಂ ಹಬ್ಬಗಳಲ್ಲಿ ಅಗ್ಗದರದಿಂದ ಅತ್ಯಾವಶ್ಯಕ ವಸ್ತುಗಳನ್ನು ಅಗ್ಗದರದಿಂದ ಜನರಿಗೆ ಒದಗಿಸಿ, ಸಾರ್ವಜನಿಕರ ಕೋಟ್ಯಾವಧಿ ರೂಪಾಯಿಯನ್ನು ಉಳಿಸಿದ್ದರು.

ಕರ್ನಾಟಕದಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಬೆಲೆ ಹೆಚ್ಚಾಗಿದೆಂಬ ಆರೋಪ ಕೇಳಿ ಬರುತ್ತಿದೆ. ಕೇಂದ್ರ ಸರಕಾರ ಅನುಸರಿಸುತ್ತಿರುವ ನೀತಿಯಿಂದಾಗಿಯೇ ಬೆಲೆ ಹೆಚ್ಚಾಗುತ್ತಿದೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಮಳೆಯಿಲ್ಲದ ಕಾರಣ ಬೆಲೆ ಹೆಚ್ಚಾಗುತ್ತದೆಂದು ಮತ್ತೊಂದು ವಾದವನ್ನು ಕೂಡ ಕೇಳುತ್ತಿದ್ದೀರಿ. ಇದೂ ಸರಿಯಲ್ಲ. ಮಳೆಯ ಅಭಾವದಿಂದಾಗಿ ಕಾಯಿಪಲ್ಲೆ ಸಾಕಷ್ಟು ಬೆಳೆಯದಿದ್ದರೆ. ಬೆಲೆ ಹೆಚ್ಚಿಸಿ ಲಾಭ ಪಡೆಯುವ ನೀತಿ ಖಂಡನೀಯ. ಮಳೆಯ ಅಭಾವದಿಂಥ ಆಹಾರಧಾನ್ಯ ಕಾಯಿಪಲ್ಲೆಗಳು ಕಡಿಮೆ ಉತ್ಪಾದನೆ ಆಗಬಹುದು, ಆದರೆ ಉತ್ಪಾದತೆ ಮಾಡುವ ಖರ್ಚಿನಲ್ಲಿ ಹೆಚ್ಚಾಗದಿರುವಾಗ, ಮಿತಿಮೀರಿದ ಬೆಲೆಯಲ್ಲಿ ಅವುಗಳನ್ನು ಮಾರಿ ಲಾಭಗಳಿಸುವುದು ಎಲ್ಲಿಯ ನ್ಯಾಯ ಇವುಗಳೆಲ್ಲ ಬಂಡವಳಶಾಹಿ ಸಮಾಜ ಪದ್ಧತಿಯ ವ್ಯಕ್ತಿಗತ ಆರ್ಥಿಕವ್ಯವಸ್ಥೆಯಕಾರಣದಿಂದಾಗಿ ನಡೆಯುತ್ತಿವೆಂಬುದನ್ನು ತಿಳಿದುಕೊಳ್ಳಬೇಕುಸದ್ಯಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಾರ್ಟಿ ಕೈಗೊಂಡಿರುವ ಚಳುವಳಿಯ ಮುಖ್ಯ ಉದ್ದೇಶವೇನೆಂದರೆ, ಜನಜಾಗೃತಿಯನ್ನುಂಟುಮಾಡಿ, ಅವರಿಗೆ ನಿಜ ಪರಿಸ್ಥಿತಿಯ ಅರಿವನ್ನುಂಟುಮಾಡಿ ಅವರೆಲ್ಲ ಅಪಪ್ರಚಾರಕ್ಕೆ ಬಲಿಯಾಗದಂತೆ ನೋಡಿ, ಸಂಘಟಿತ ಚಳುವಳಿಯ ಮೂಲಕ ರಾಜ್ಯ ಮತ್ತು ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದು, ಸರಕಾರದ ಸಹಾಯದಿಂದ ಅಗ್ಗದರದ ಅಂಗಡಿಗಳ ಮೂಲಕ ಜನರಿಗೆ ನ್ಯಾಯ ಬೆಲೆಯಲ್ಲಿ ಅತ್ಯಾವಶ್ಯಕ ವಸ್ತುಗಳ ಆಹಾರ ಧಾನ್ಯಗಳ ವಿತರಣೆಯಾಗುವಂತೆ ನೋಡಿಕೊಳ್ಳುವುದಾಗಿದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ, ಗ್ರಾಹಕರಿಗೆ ಪರಿಹಾರ ಕೊಡಿಸಲು ಎಲ್ಲರೂ ಮುಂದಾಗಬೇಕು.

ಬೆಂಗಳೂರು :

ಆಟೋರಿಕ್ಷಾ ಚಾಲಕರ ಮುಷ್ಕರ ಸಂಪೂರ್ಣ ಯಶಸ್ವಿ

ಅಟೋರಿಕ್ಷಾ ಚಾಲಕರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅಟೋರಿಕ್ಷಾ ಚಾಲಕರ ಸಂಘವು ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಕರೆ ಕೊಟ್ಟ ಮೇರೆಗೆ ದಿನಾಂಕ 19-7-83 ರಂದು ನಗರದ ಸುಮಾರು 20ಸಾವಿರಕ್ಕೂ ಹೆಚ್ಚು ಆಟೋ ಚಾಲಕರು ಮುಷ್ಕರದಲ್ಲಿ ಭಾಗವಹಿಸಿ ಸಂಪೂರ್ಣವಾಗಿ ಯಶಸ್ವಿಗೊಳಿಸಿರುತ್ತಾರೆ. ಸಾವಿರಾರು ಆಟೋ ರಿಕ್ಷಾ ಚಾಲಕರು ಅಂದು ಬೆಳಿಗ್ಗೆ ಚಿಕ್ಕಲಾಲ್‌ಬಾಗಿನಲ್ಲಿ ಸಭೆ ಸೇರಿ 11-30ಗಂಟೆಗೆ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣ ಸತ್ಯಾಗ್ರಹ ಹೂಡಿದರು. ಜಿಲ್ಲಾಧಿಕಾರಿಗಳು ಸಂಘದ ಪ್ರತಿನಿಧಿಗಳನ್ನು ಮಾತುಕತೆಗೆ ಆಹ್ವಾನಿಸಿದರು. ಸಿ. ಐ. ಟಿ. ಯು. ಅಧ್ಯಕ್ಷರು ಹಾಗೂ ಶಾಸಕರಾದ ಕಾಂ॥ ಎಸ್. ಸೂರ್ಯನಾರಾಯಣರಾವ್, ಸಂಘದ ಅಧ್ಯಕ್ಷರಾದ ಕಾ। ಕೆ. ಆರ್. ವೆಂಕಟೇಶಗೌಡ ಮತ್ತು ಕಾರ್ಯದರ್ಶಿಗಳಾದ ಕಾ॥ ಎ. ವಿ. ರಮೇಶರವರು ಚಾಲಕರ ಬೇಡಿಕೆಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಆರ್. ಟಿ. ಓ. ಕಾರ್ಯದರ್ಶಿಗಳ ಸಮ್ಮುಖದಲ್ಲಿ ಮಾತುಕತೆ ನಡೆಸಿದರು.

ರಾಷ್ಟ್ರೀಯ ಉಳಿತಾಯ ಯೋಜನೆಯನ್ನು ಕಡ್ಡಾಯಗೊಳಿಸುವುದಿಲ್ಲ. ಹೊಸ ಪರ್ಮಿಟುಗಳನ್ನು ಕೊಡಕೂಡದೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ನಗರ ಸರಹದ್ದಿನಿಂದಹೊರಗಡೆ ಒಂದೂವರೆದರವನ್ನು ಕೊಡ ಬೇಕೆಂಬುದನ್ನು ಪ್ರಕಟಿಸುವುದಾಗಿಯೂ. ಚಾಲಕರ ಸಮಸ್ಯೆಗಳನ್ನು ಸಂಘದ ಪ್ರತಿನಿಧಿಗಳ ಜೊತೆ ಮಾತನಾಡಿ ಬಗೆಹರಿಸಲು ಆರ್. ಟಿ. ಓ.ನಲ್ಲಿರುವ ಮಧ್ಯವರ್ತಿಗಳನ್ನು ತಡೆಗಟ್ಟುವುದಾಗಿ ಮತ್ತು ಇನ್ನೂ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಡುವುದಾಗಿ ಜಿಲ್ಲಾಧಿಕಾರಿಗಳು ಅಶ್ವಾಸನೆ ಕೊಟ್ಟಿರುತ್ತಾರೆ.

ಈ ಮುಷ್ಕರ ಮತ್ತು ಧರಣಿಯಲ್ಲಿ ಬಂದು ಭಾಗವಹಿಸಿ ಯಶಸ್ವಿಗೊಳಿಸಿದ ಆಟೋರಿಕ್ಷಾ ಚಾಲಕರಿಗೆ ಸಂಘವು ಕೃತಜ್ಞತೆಯನ್ನು ಸಲ್ಲಿಸಿದೆ.

ಆಟೋ ಚಾಲಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅನಿವಾರ್ಯವಾಗಿ ಮುಷ್ಕರ ಹೂಡಿದ್ದರಿಂದ ಸಾರ್ವಜನಿಕರಿಗೆ ಹಾಗೂ ವಿಶೇಷವಾಗಿ ಆಟೋ ಪ್ರಯಾಣಿಕರಿಗೆ ತೊಂದರೆಯಾಗಿದ್ದಕ್ಕೆ ಸಂಘವು ತನ್ನ ವಿಷಾದ ವ್ಯಕ್ತಪಡಿಸಿದೆ.

ಕಾರ್ಮಿಕರ ಮೇಲೆ ಹಲ್ಲೆ

ಎನ್. ಎಫ್. ಎಲ್. ಆಡಳಿತ ವರ್ಗದ ಕಾನೂನು ಬಾಹಿರ ವರ್ತನೆ

ಹರ್‍ಯಾಣ ರಾಜ್ಯದ ಪಾಣೀಪತದಲ್ಲಿ ರಾಷ್ಟ್ರೀಯ ರಸಗೊಬ್ಬರ ಕಾರ್ಖಾನೆ (ಎನ್.ಎಫ್.ಎಲ್.)ಯಲ್ಲಿ ನೂರಾರು ಕಾರ್ಮಿಕರನ್ನು ಕಾಂಟ್ರಾಕ್ಟ್ ಮೇಲೆ ದುಡಿಸಿಕೊಳ್ಳಲಾಗುತ್ತಿದೆ. ಈ ರೀತಿ ದುಡಿಯುತ್ತಿದ್ದ ಒಂಭತ್ತು ಕಾರ್ಮಿಕರನ್ನು ಸಾರ್ವಜನಿಕ ವಲಯದ ಈ ಕಾರ್ಖಾನೆಯ ಆಡಳಿತವರ್ಗ ರಿಟ್ರೆಂಚ್ ಮಾಡಿತ್ತು. ಇದರ ವಿರುದ್ಧವಾಗಿ ಎನ್.ಎಫ್.ಎಲ್. ಲಾಲ್ ಝಂಡಾ ವರ್ಕರ್ಸ್ ಯೂನಿಯನ್ ನಡೆಸಿದ ಹೋರಾಟದಿಂದಾಗಿ ದಿ. 21-6-83 ರಂದು ಆಡಳಿತ ವರ್ಗ ಹಾಗೂ ಯೂನಿಯನ್ ನಡುವೆ ರಾಜೀ ಒಪ್ಪಂದ ಏರ್ಪಟ್ಟು ಅದರ ಪ್ರಕಾರ ಈ ಒಂಭತ್ತು ಕಾರ್ಮಿಕರನ್ನು ಅವರ ಸೇವಾವಧಿಯಲ್ಲಿ ಯಾವ ರೀತಿಯ ಅಂತರವೂ ಬರದಂತೆ ತಕ್ಷಣ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಆದರೆ ಮರುದಿನ ಈ ಕಾರ್ಮಿಕರು ಕೆಲಸಕ್ಕೆ ಹಾಜರಾಗಲು ಬಂದಾಗ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿ.ಐ.ಎಸ್.ಎಫ್.) ಯವರು ಅವರನ್ನು ಕಾರ್ಖಾನೆಯ ಆವರಣವನ್ನು ಪ್ರವೇಶಿಸಲು ಬಿಡಲಿಲ್ಲ. ಆಡಳಿತ ವರ್ಗ ಈ ರೀತಿ ಒಪ್ಪಂದವನ್ನು ಉಲ್ಲಂಘಿಸಿರುವುದನ್ನು ವಿರೋಧಿಸಿ ಅದನ್ನು ತಕ್ಷಣ ಪಾಲಿಸಬೇಕೆಂದು ಒತ್ತಾಯಿಸಿ ಕಾರ್ಮಿಕರು ಹೋರಾಟ ಆರಂಭಿಸಿದರು.

ಜುಲೈ 1 ರಂದು ಕಾರ್ಮಿಕರು ಕಾರ್ಖಾನೆಯ ಮುಖ್ಯ ದ್ವಾರದೆದುರು ಧರಣಿ ನಡೆಸುತ್ತಿರುವಾಗ ಹರ್‍ಯಾಣ ಪೋಲೀಸ್ ಹಾಗೂ ಸಿ. ಐ. ಎಸ್. ಎಫ್. ನವರು ಅನಗತ್ಯವಾಗಿ ಲಾಠಿ ಪ್ರಹಾರ ನಡೆಸಿದ್ದರಿಂದ ನೂರಾರು ಕಾರ್ಮಿಕರು ಗಾಯಗೊಂಡರು.

ಪೋಲೀಸರ ಹಾಗೂ ಸಿ.ಐ.ಎಸ್. ಎಫ್. ಪಡೆಗಳ ಈ ಅತಿರೇಕದ ವರ್ತನೆಯನ್ನು ಪ್ರತಿಭಟಿಸಿ ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ., ಬಿ.ಎಂ.ಎಸ್. ಹಾಗೂ ಇತರ ಕಾರ್ಮಿಕ ಸಂಘಗಳ ಜಂಟೀ ಸಮಿತಿಯೊಂದು ಮರುದಿನ ಅಂದರೆ ಜುಲೈ 2ರಂದು ಪ್ರತಿಭಟನಾ ಸಾರ್ವಜನಿಕ ಸಭೆ ನಡೆಸಲು ಕರೆ ನೀಡಿತು.

ಈ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಕಾರ್ಯದರ್ಶಿ ಕಾ॥ ಪಿ. ಕೆ. ಗಂಗೂಲಿಯವರು ಮಾತನಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಪೋಲೀಸರು ಹಾಗೂ ಸಿ.ಐ.ಎಸ್.ಎಫ್. ಜವಾನರು ಮುತ್ತಿಗೆ ಹಾಗಿ ಮನಸ್ಸಿಗೆ ಬಂದಂತೆ ಲಾಠೀ ಪ್ರಹಾರ ನಡೆಸಿದರು. ನೂರಾರು ಕಾರ್ಮಿಕರನ್ನು ಜಖಂಗೊಳಿಸಿದರು. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಬಿ.ಎಂ.ಎಸ್. ಹಾಗೂ ಇತರ ಕಾರ್ಮಿಕ ಸಂಘಗಳ ಹಲವಾರು ಕಾರ್ಯಕರ್ತರನ್ನು ಬಂಧಿಸಲಾಯಿತು. ಕೈ ಕಾಲು ಮುರಿದುಕೊಂಡ ಹಲವಾರು ಕಾರ್ಮಿಕರಿಗೆ ವೈದ್ಯಕೀಯ ಚಿಕಿತ್ಸೆ ನಿರಾಕರಿಸಲಾಯಿತು. ಇಲ್ಲಿ ಇನ್ನೂ ಒಂದು ಗಮನಿಸಬೇಕಾದ ಅಂಶವೆಂದರೆ ಅಂದು ಸೆಕ್ಷನ್ 144 ಜಾರಿಯಾಗಿದ್ದು, ಈ ಸಭೆಗೆ ಮೊದಲೆ ಅನುಮತಿ ಪಡೆಯಲಾಗಿತ್ತು.

ಆಡಳಿತ ವರ್ಗವೇ ಮೂಲ ಕಾರಣ

ಪಾಣೀಪತದಲ್ಲಿ ಕಾರ್ಮಿಕರ ಮೇಲೆ ನಡೆದ ಈ ಬರ್ಬರ ಅತ್ಯಾಚಾರದ ಸುದ್ದಿ ತಿಳಿದೊಡನೇ ಲೋಕಸಭೆಯಲ್ಲಿ ಸಿ. ಪಿ. ಐ. (ಎಂ) ನ ಉಪ ನಾಯಕ ಇ. ಬಾಲನಂದನ್ ಹಾಗೂ ಎ.ಐ.ಟಿ.ಯು.ಸಿ. ಯ ಉಪಾಧ್ಯಕ್ಷ ಬಿ.ಡಿ. ಜೋಶಿ, ಹರ್‍ಯಾಣದ ಸಿ.ಐ.ಟಿ.ಯು. ಹಾಗೂ ಎ.ಐ.ಟಿ.ಯು.ಸಿ. ನಾಯಕರೊಂದಿಗೆ ಜುಲೈ 4 ರಂದು ಪಾಣೀಪತಕ್ಕೆ ಭೇಟಿಯಿತ್ತರು. ದಮನಕ್ಕೆ ತುತ್ತಾದ ಕಾರ್ಮಿಕರನ್ನು, ವಿವಿಧ ರಂಗಗಳಲ್ಲಿನ ನಾಗರಿಕರನ್ನು ಕರ್ನಾಲ್‌ನಲ್ಲಿ ಡೆಪ್ಯುಟಿ ಕಮಿಷನರ್‌ರವರನ್ನೂ ಕಂಡು ಮಾತನಾಡಿದ ಈ ತಂಡ ಕಾರ್ಖಾನೆಯ ಆಡಳಿತವರ್ಗ ಕಾಂಟ್ರಾಕ್ಟರುಗಳೊಂದಿಗೆ ಶಾಮೀಲಾಗಿ ಯೂನಿಯನ್ನೊಂದಿಗೆ ನಡೆದ ಒಪ್ಪಂದವನ್ನು ಉಲ್ಲಂಘಿಸಿ ಹೊಸ ಕಂಟ್ರಾಕ್ಟ್ ಕಾರ್ಮಿಕರನ್ನು ನೇಮಿಸಿಕೊಂಡು ಸಂಘಟಿತ ಕಾರ್ಮಿಕರನ್ನು ಸದೆಬಡಿಯಲು ಪ್ರಯತ್ನಿಸಿದುದೇ ಈ ಎಲ್ಲಾ ಗಲಭೆಗೆ ಮೂಲ ಕಾರಣ ಎಂದು ಅಭಿಪ್ರಾಯಪಟ್ಟಿದೆ.

ಪೋಲೀಸರೂ ಕೂಡಾ ಯಾವ ಪ್ರಚೋದನೆಯೂ ಇಲ್ಲದೆ ಅನಗತ್ಯವಾಗಿ ಕಾರ್ಮಿಕರ ಮೇಲೆ ಹಲ್ಲೆ ಮಾಡಿ ಆಡಳಿತ ವರ್ಗ ಹಾಗೂ ಕಾಂಟ್ರಾಕ್ಟರುಗಳೊಂದಿಗೆ ಶಾಮೀಲಾದರೆಂದು ಪತ್ರಿಕಾ ಹೇಳಿಕೆಯೊಂದರಲ್ಲಿ ಇ. ಬಾಲನಂದನ್ ಹಾಗೂ ಜೋಶಿಯವರು ಹೇಳಿದ್ದಾರೆ. ಎನ್. ಎಫ್. ಎಲ್. ನ ಆಡಳಿತ ವರ್ಗ ಈ ರೀತಿಯಾಗಿ ಉದ್ದೇಶ ಪೂರ್ವಕವಾಗಿ ಕಾನೂನು ಬಾಹಿರವಾಗಿ ವರ್ತಿಸಿ ಏಕೆ ಕೈಗಾರಿಕಾ ಅಶಾಂತಿಗೆ ಆಹ್ವಾನ ಕೊಡುತ್ತಿದೆಯೆಂಬುದು ಅರ್ಥವಾಗುತ್ತಿಲ್ಲ ಎಂದೂ ಅವರು ಹೇಳಿದ್ದಾರೆ. ತಕ್ಷಣ ಮಧ್ಯ ಪ್ರವೇಶಿಸಿ ಎನ್. ಎಫ್. ಎಲ್. ನ ಆಡಳಿತ ವರ್ಗ ಒಪ್ಪಂದ ಪಾಲಿಸುವಂತೆ ಮಾಡಬೇಕೆಂದು ಗಲಭೆಗೆ ಕಾರಣರಾದ ಅಧಿಕಾರಿಗಳನ್ನು ಶಿಕ್ಷಿಸಬೇಕೆಂದು ಕೇಂದ್ರ ಸರಕಾರವನ್ನೂ, ಪೋಲೀಸ್ ಅತಿರೇಕದ ವರ್ತನೆಯ ವಿರುದ್ಧ ಸಾರ್ವಜನಿಕ ತನಿಖೆ ಏರ್ಪಡಿಸಬೇಕೆಂದು ಹರ್‍ಯಾಣಾ ಮುಖ್ಯ ಮಂತ್ರಿಯವರನ್ನು ಈ ಇಬ್ಬರು ನಾಯಕರು ಒತ್ತಾಯಿಸಿದ್ದಾರೆ.

ಸಿ. ಐ. ಟಿ. ಯು. ಖಂಡನೆ

ಜುಲೈ 1 ಹಾಗೂ 2ರಂದು ಪಾಣೀಪತದ ಕಾರ್ಮಿಕರ ಮೇಲೆ ನಡೆದ ಈ ಅಮಾನುಷ ಅತ್ಯಾಚಾರವನ್ನು ಸಿ. ಐ. ಟಿ. ಯು. ಬಲವಾಗಿ ಖಂಡಿಸಿದೆ. ಸಿ.ಐ.ಟಿ.ಯು.ನ ಖಜಾಂಚಿಯವರು ನೀಡಿದ ಹೇಳಿಕೆಯಲ್ಲಿ, ಒಪ್ಪಂದವನ್ನು ಉಲ್ಲಂಘಿಸಿದ ಎನ್. ಎಫ್. ಎಲ್. ನ ಆಡಳಿತ ವರ್ಗ ಸಿ. ಐ. ಎಸ್. ಎಫ್. ನ್ನೂ ಪೋಲೀಸರೊಂದಿಗೆ ಕಾರ್ಮಿಕರ ನಡುವೆ ಭಯ ಹುಟ್ಟಿಸಲು ಹರಿಯಬಿಟ್ಟಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿ ಲಾಠೀ ಪ್ರಹಾರದ ನ್ಯಾಯಾಂಗ ತನಿಖೆ ಏರ್ಪಡಿಸಬೇಕು, ಗಾಯಗೊಂಡ ಕಾರ್ಮಿಕರಿಗೆ ಪರಿಹಾರ ನೀಡಬೇಕು, ಹಾಗೂ ಸುಳ್ಳು ಕೇಸುಗಳನ್ನೆಲ್ಲಾ ವಾಪಾಸು ಪಡೆಯಬೇಕೆಂದು ಒತ್ತಾಯಿಸಿದ್ದಾರೆ. ಕೇಂದ್ರ ಸರಕಾರ ಮಧ್ಯ ಪ್ರವೇಶಿಸಿ ಎನ್. ಎಫ್. ಎಲ್. ನ ಕಾರ್ಯನಿರ್ವಹಣೆಯ ಬಗ್ಗೆ ತನಿಖೆ ನಡೆಸಬೇಕೆಂದೂ ಒತ್ತಾಯಿಸಲಾಗಿದೆ. ಈ ಬರ್ಬರ ಅತ್ಯಾಚಾರದ ವಿರುದ್ಧ ಪ್ರತಿಭಟನೆಯ ದನಿಯೆತ್ತಿ ಆಡಳಿತ ವರ್ಗದ ಹಲ್ಲೆ ಎದುರಿಸಲು ಸಂಯುಕ್ತ ಚಳವಳಿ ಬೆಳೆಸಬೇಕೆಂದು ಸಿ. ಐ. ಟಿ. ಯು. ಕರೆ ನೀಡಿದೆ.

ಆರ್ಥಿಕ ಪರಿಸ್ಥಿತಿ

(2ನೇ ಪುಟದಿಂದ)

ಸಂಬಂಧಿಕರ ಕೊಲೆಯನ್ನೂ, ಪಾಣಿಪತದಲ್ಲಿ ರಾಷ್ಟ್ರೀಯ ಗೊಬ್ಬರ ಕಾರ್ಖಾನೆಯ, ಹಿಮಾಚಲ ಟ್ರಾಕ್ಟರ್ ಕಾರ್ಖಾನೆಯ ಕೆಲಸಗಾರರ ಮೇಲೆ ನಡೆದಿರುವ ಪೋಲೀಸ್ ಲಾಠೀ ಚಾರ್ಜನ್ನೂ ಪಿ. ಬಿ. ಖಂಡಿಸುತ್ತದೆ. ಕಾರ್ಮಿಕ ವರ್ಗದ ಐಕ್ಯತೆ ಬೆಳೆಯುತ್ತಿರುವಾಗ, ಪೋಲೀಸರು ಕೆಲವು ಕೆಲಸಗಾರರ ಜೊತೆ ಸೇರಿ ಐಕ್ಯತೆ ಮುರಿಯುವ ಕುತಂತ್ರ ನಡೆಸಿರುವುದು ಖಂಡನೀಯ.

ಆರ್ಥಿಕ ಸಮಸ್ಯೆಗಳ ಮತ್ತು ತಮ್ಮ ಬೇಡಿಕೆಗಳನ್ನು ಪಡೆಯುವುದರ ಸಲುವಾಗಿಯಷ್ಟೇ ಕಾರ್ಮಿಕ ವರ್ಗದಲ್ಲಿ ಐಕ್ಯತೆ ಬೆಳೆದು ಬರುತ್ತಿರುವುದಲ್ಲ. ಪ್ರಜಾ ಪ್ರಭುತ್ವವನ್ನು ರಕ್ಷಿಸುವ ಸಲುವಾಗಿಯೂ ಜಗತ್ತಿನಾದ್ಯಂತ ಶಾಂತಿಯ ಸಲುವಾಗಿಯೂ ಕಾರ್ಮಿಕ ಸಂಘಟನೆಗಳು ರಾಜಕೀಯ ಹೋರಾಟಗಳಲ್ಲಿ ಸೇರಿಕೊಳ್ಳುತ್ತಿವೆ. ಅಣು ಯುದ್ಧದ ಅಪಾಯವನ್ನು ಅರಿತುಕೊಂಡ ಪಿ. ಬಿ. ಶಾಂತಿಗಾಗಿ ನಡೆಯುವ ಚಳುವಳಿಯಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡಿದೆ.

ದ. ಕನ್ನಡ

ಮೂರ್ತೆದಾರರ ಮಹಾಸಭೆ

ದ. ಕ. ಜಿಲ್ಲಾ ಮೂರ್ತೆದಾರರ ಸಂಘ (ಸಿ. ಐ. ಟಿ. ಯು) ಇದರ ಪ್ರಥಮ ವಾರ್ಷಿಕ ಮಹಾ ಸಭೆಯು ತಾ. 11-7-83ರಂದು ಕಾ। ಯು. ಪೂವಪ್ಪರವರ ಅಧ್ಯಕ್ಷತೆಯಲ್ಲಿ, ಬೋಳಾರದ ಹಂಚಿನ ಮಜೂರರ ಆಫೀಸಿನಲ್ಲಿ ಸೇರಿತು.

ಸಭೆಯು ಪ್ರಾರಂಭದಲ್ಲಿ, ಇತ್ತೀಚೆಗೆ ಮೃತಪಟ್ಟ ನಾಯಕರುಗಳಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸದಸ್ಯ ಕಾ। ಪ್ರಮೋದ್‌ದಾಸ್ ಗುಪ್ತಾ, ತಮಿಳ್ನಾಡಿನ ಕಾರ್ಮಿಕ ನಾಯಕ ಕಾ। ಆರ್. ವೆಂಕಟರಾಮನ್, ಕರ್ನಾಟಕದ ಮಾಜಿ ಎಂ. ಎಲ್. ಎ. ಕಾ। ಗಂಗಾಧರ ನಮೋಷಿ, ಕೆ. ಜಿ. ಎಫ್ ಕಾರ್ಮಿಕ ನಾಯಕ ಕಾ। ಆರೋಗ್ಯ ದಾಸ್ ಹಾಗೂ ಇತರ ಸಂಗಾತಿಗಳಿಗೆ ಸಭೆಯು ಶ್ರದ್ಧಾಂಜಲಿಯನ್ನರ್ಪಿಸಿತು.

ಗತ ವರ್ಷದ ಸಂಘದ ಆದಾಯ ಮತ್ತು ಖರ್ಚಿನ ಲೆಕ್ಕಪತ್ರವನ್ನು ಕಾ॥ ಪಿ. ಬಾಬುರವರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಸಿ. ಐ. ಟಿ. ಯು ವಿನ ಧೋರಣೆಯನ್ನು ವಿವರಿಸಿದ ಕಾ॥ ಯು. ಬಿ. ಲೋಕಯ್ಯರವರು ಮುಂದುವರಿದು ಕಳೆದ ಜನವರಿಯಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ (ಐ)ಯ ಆಡಳಿತವನ್ನು ಕೊನೆಗೊಳಿಸುವಲ್ಲಿ ಮೂರ್ತೆದಾರರ ಪಾತ್ರವೂ ಸೇರಿದೆ ಎಂದರು. ಜಿಲ್ಲೆಯ ಮೂರ್ತೆದಾರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಬರುವ ಅಗಸ್ಟ್ ತಿಂಗಳಲ್ಲಿ ರಾಜ್ಯಾದ್ಯಂತ ನಡೆಯುವ ಆಹಾರ ಚಳವಳಿಯಲ್ಲಿ ಮೂರ್ತೆದಾರರೆಲ್ಲರೂ ಭಾಗವಹಿಸಬೇಕೆಂದರು.

ಸಭೆಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದ. ಕ. ಜಿಲ್ಲಾ ಬೀಡಿ ಫೆಡರೇಶನಿನ ಜೊತೆ ಕಾರ್ಯದರ್ಶಿ ಕಾ॥ ಬಾಲಕೃಷ್ಣಶೆಟ್ಟಿಯವರು ಮಾತನಾಡುತ್ತಾ, ಇಂದು ಸಂಘಟಿತರಾಗಿರುವ ಮೂರ್ತೆದಾರರು ತಮ್ಮ ಸಂಘಟನೆಯನ್ನು ಇನ್ನಷ್ಟು ವೃದ್ಧಿಸಿ ಬಲಪಡಿಸಬೇಕೆಂದರು.

ಮುಂದಿನ ವರ್ಷಕ್ಕೆ ಕಾ॥ ಯು. ಪೂವಪ್ಪರವರು ಅಧ್ಯಕ್ಷರಾಗಿ, ಕಾ॥ ಬಾಬು ಪೂಜಾರಿ ಉಪಾಧ್ಯಕ್ಷ, ಕಾ॥ ಯು.ಬಿ. ಲೋಕಯ್ಯ ಕಾರ್ಯದರ್ಶಿ, ಜೊತೆ ಕಾರ್ಯದರ್ಶಿಯಾಗಿ ಕಾ॥ ಶೀನ ಪೂಜಾರಿ ಹಾಗೂ ಕಾ॥ ಪಿ. ಬಾಬು ಕೋಶಾಧಿಕಾರಿಯಾಗಿರುವ ಒಟ್ಟು 16 ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕೊನೆಯಲ್ಲಿ ಕಾ॥ ಪಿ. ಬಾಬುರವರು ಧನ್ಯವಾದವಿತ್ತರು.

ಕಂಪೂಚಿಯಾ ಜನತಾ ಕ್ರಾಂತಿಕಾರೀ ಪಕ್ಷಕ್ಕೆ ಶುಭಾಶಯಗಳು

ಸಿ.ಪಿ.ಐ. (ಎಂ)ನ ಪ್ರಧಾನ ಕಾರ್ಯದರ್ಶಿ ಕಾ॥ ಇ. ಎಂ. ಎಸ್. ನಂಬೂದಿರಿಪಾಡ್ ಅವರು ಜೂನ್ 28ರಂದು ಈ ಕೆಳಕಂಡ ಸಂದೇಶವನ್ನು ಪೀಪಲ್ಸ್ ರೆವಲ್ಯೂಶನರಿ ಪಾರ್ಟಿ ಆಫ್ ಕಂಪೂಚಿಯಾದ ಕೇಂದ್ರ ಸಮಿತಿಗೆ ಕಳುಹಿಸಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯ ಪರವಾಗಿ ನಾನು ನಮ್ಮ ಕ್ರಾಂತಿಕಾರೀ ಶುಭಾಶಯಗಳನ್ನು ನಿಮ್ಮ ಪಕ್ಷದ ಮೂವತ್ತೆರಡನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಲ್ಲಿಸುತ್ತೇನೆ.

ಮಹಾನ್ ಕ್ರಾಂತಿಕಾರೀ ನಾಯಕ ಹೋಚಿಮಿನ್ ಅವರು ಸ್ಥಾಪಿಸಿ, ಮಾರ್ಗದರ್ಶನ ನೀಡಿದ ಇಂಡೋ-ಚೀನಾ ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ 1951ರಲ್ಲಿ ಜನ್ಮ ತಾಳಿದ ನಿಮ್ಮ ಪಕ್ಷವನ್ನು ಅಭಿನಂದಿಸುತ್ತೇವೆ.

ಕಂಪೂಚಿಯಾದ ಜನತೆ ನಿಮ್ಮ ಪಕ್ಷದ ನಾಯಕತ್ವದಲ್ಲಿ ಫ್ರೆಂಚ್ ವಸಾಹತುಶಾಹಿಗಳಿಗಿದಿರಾಗಿ ಗಳಿಸಿದ ಮಹಾನ್ ಗೆಲುವು ಸದಾ ಸ್ಮರಣೀಯ. ಅಲ್ಲದೆ ಎಡಸಾಹಸವಾದಿ ಪೋಲ್ ಪೋಟ್ ಆಡಳಿತವನ್ನು ವಿಯಟ್ನಾಂ ಜನತೆಯ ಸೌಹಾರ್ದ ಬೆಂಬಲದೊಂದಿಗೆ ಅಂತ್ಯಗೊಳಿಸಿದ್ದು ನಿಮ್ಮ ಪಕ್ಷದ ನೇತೃತ್ವದಲ್ಲೇ. ಅಲ್ಲಿಂದೀಚೆಗೆ ನಿಮ್ಮ ಪಕ್ಷವು ಪೋಲ್ ಪೋಟ್ ಆಡಳಿತದ ವಿಧ್ವಂಸಕ ಪರಿಣಾಮಗಳನ್ನು ಸರಿಪಡಿಸುವುದರತ್ತ ಕಂಪೂಚಿಯಾದ ಜನತೆಯನ್ನು ಹುರಿದುಂಬಿಸಿ ನಡೆಸಿದ ಹೋರಾಟ ಮತ್ತು ವಿಯಟ್ನಾಂ, ಲಾವೋಸ್ ಮತ್ತು ಸೋವಿಯೆತ್ ಯೂನಿಯನ್‌ಗಳ ಸಂಪೂರ್ಣ ಬೆಂಬಲದಿಂದ ಹೊಸ ಸಮಾಜವನ್ನು ರೂಪಿಸಿದ್ದು ಗಮನಾರ್ಹ ಸಾಧನೆಗಳಾಗಿವೆ. ಅದೇ ಸಂದರ್ಭದಲ್ಲಿ ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಕೆಲವು ದಕ್ಷಿಣ ಪೂರ್ವ ಏಷ್ಯನ್ ರಾಷ್ಟ್ರಗಳ ಸಹಾಯದೊಂದಿಗೆ ಇಂಡೋ-ಚೀನಾದ ಮೂರು ದೇಶಗಳಲ್ಲಿ ಸ್ವಾತಂತ್ರ್ಯ ಮತ್ತು ಸಮಾಜವಾದದ ವಿರುದ್ಧ ನಡೆಸುತ್ತಿರುವ ವಿಧ್ವಂಸಕ ಚಟುವಟಿಕೆಗಳನ್ನು ಯಶಸ್ವಿಯಾಗಿ ಎದುರಿಸುತ್ತಿರುವುದೂ ಕೂಡ ಗಮನೀಯವಾದುದು.

ಸಾಮ್ರಾಜ್ಯಶಾಹಿಗಳಿಗೆದುರಾಗಿ ಮತ್ತು ಪೋಲ್ ಪೋಟ್‌ನ ಅವಶೇಷಗಳಿಗೆದುರಾಗಿ ನೀವು ನಡೆಸುತ್ತಿರುವ ಹೋರಾಟ ಮತ್ತು ಕಂಪೂಚಿಯಾದಲ್ಲಿ ಸಮಾಜವಾದೀ ಸಮಾಜವನ್ನು ನಿರ್ಮಿಸಲು ನೀವು ನಡೆಸಿರುವ ಹೋರಾಟಗಳಿಗೆ ಜಯ ದೊರೆಯಲೆಂದು ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿ ಆಶಿಸುತ್ತದೆ.

ವಿಜಯನಗರ ಉಕ್ಕಿನ ಕಾರ್ಖಾನೆ

(1ನೇ ಪುಟದಿಂದ)

ಕುಂಠಿತಗೊಂಡಿತ್ತು. ಆದರೂ ಕೂಡ ವಿಜಯನಗರ ಉಕ್ಕಿನ ಕಾರ್ಖಾನೆ ಮಾಡಿಯೇ ತೀರಬೇಕೆಂದು ತಿಳಿದೇ ಇಂದಿರಾಗಾಂಧಿಯವರು ಅಡಿಗಲ್ಲು ಹಾಕಿಲ್ಲವೇ ? ಅಥವಾ ಮತ್ತೇನಾದರೂ ಕಾರಣವಿದೆಯೇ, ಇಂದಿರಾ ಗಾಂಧಿಯ ಈಗಿನ ಧೋರಣೆ ನೋಡುವಾಗ ಅಡಿಗಲ್ಲು ಸಮಾರಂಭ ಕನ್ನಡಿಗರಿಗೆ ಮೋಸಮಾಡುವ ಸಲುವಾಗಿಯೇ. ಅವರ ಮತ ಪಡೆದು ಅಧಿಕಾಕ್ಕೆ ಬರುವುದರ ಸಲುವಾಗಿಯೇ ಇತ್ತೆಂಬ ಸಂಶಯ ಉಂಟಾಗುತ್ತದೆ. 1967-72ರ ನಡುವೆ, ದೇಶದ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ಸು ತನ್ನ ಅಧಿಕಾರ ಕಳೆದುಕೊಂಡಿತ್ತು. 1969 ರಲ್ಲಿ ಕಾಂಗ್ರೆಸ್ಸು ಇಬ್ಭಾಗವಾಯಿತು. 1972ರ ಚುನಾವಣೆಯಲ್ಲಿ ಅಧಿಕಾರ ಮತ್ತೇ ಪಡೆಯುವ ದುರುದ್ದೇಶದಿಂದಲೇ ದಕ್ಷಿಣದ ರಾಜ್ಯಗಳಲ್ಲಿ ತಮ್ಮ ಪಕ್ಷ ಸೋಲಬಾರದೆಂಬ ದೃಷ್ಟಿಯಿಂದಲೇ ವಿಜಯನಗರ, ಸೇಲಂ, ವಿಶಾಖಪಟ್ಟಣಗಳಲ್ಲಿ, ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗಾಗಿ ಅಡಿಗಲ್ಲು ಹಾಕಿ ಮೋಸ ಮಾಡಲಾಯಿತೆಂಬ ವಿಷಯ ಈಗ ಸ್ಪಷ್ಟವಾಗುತ್ತಿದೆ. ಇಷ್ಟು ದಿವಸ ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ವಿಜಯನಗರ ಕಾರ್ಖಾನೆ ಮಾಡಿಯೇ ತೀರುತ್ತೇವೆಂಬ ಸೊಲ್ಲು ಕೇಳಿ ಬರುತ್ತಲೇ ಇತ್ತು. ಈ ಸಲದ ಚುನಾವಣೆಯಲ್ಲಿ ತಮ್ಮ ಪಕ್ಷ ಸೋತಿರುವುದರಿಂದ "ವಿಚಾರ ಹೀನ, ಬಂಡುಖೋರ ಕನ್ನಡಿಗರಿಗೆ ಬುದ್ಧಿ ಕಲಿಸಿಯೇ ತೀರುತ್ತೇನೆ" ಎಂದು ತಿಳಿದೇ ಇಂದಿರಾ ಗಾಂಧಿಯವರು ದೃಢವಾಗಿಯೇ ಹೇಳಿದ್ದಾರೆ "ಉಕ್ಕಿನ ಕಾರ್ಖಾನೆಗೂ ಮುಂಚೆ ಆಗಬೇಕಾದ ಜರೂರು ಕೆಲಸಗಳು ಬೇರೆ ಇವೆ" ಕಾರಣ ಸದ್ಯಕ್ಕಂತೂ ಉಕ್ಕಿನ ಕಾರ್ಖಾನೆ ಇಲ್ಲ ಎಂದು. ಇದರ ಅರ್ಥವೇನೆಂದರೆ "ನನ್ನವರೇ ಆದ ಕನ್ನಡಿಗರೇ, ಜನತಾ ಸರಕಾರವನ್ನು ಉರುಳಿಸಿ, ನೀವು ಮಾಡಿದ ಪಾಪವನ್ನು ತೊಳೆದುಕೊಳ್ಳಿರಿ. ಅನಂತರ ನಿಮ್ಮ ಅಪೇಕ್ಷೆಗಳನ್ನು ಪೂರೈಸುವ ಆಶ್ವಾಸನೆಗಳ ಸುರಿಮಳೆಯನ್ನೇ ಗರೆಯುತ್ತೇನೆ, "ತಿಳಿಯಿತೇ".

ಜನತಾ ಆಳ್ವಿಕೆಯಲ್ಲಿ ಎಲ್ಲಾ ಹಾಳು ಮಾಡಿದ್ದನ್ನು ಇನ್ನೂ ರಿಪೇರಿ ಮಾಡುತ್ತಿದ್ದೇವೆ. ಆದ ಕಾರಣ ವಿಜಯನಗರ ಕಾರ್ಖಾನೆ ನಿಮಗಿಲ್ಲ ಎಂದಿದ್ದಾರೆ ಇಂದಿರಾಗಾಂಧಿಯವರು. ಜನತಾ ಸರಕಾರ ಅಧಿಕಾರದಲ್ಲಿದ್ದದ್ದು ಬರೇ 19 ತಿಂಗಳು ಮಾತ್ರ. 1971ರಿಂದ 77ರವರೆಗೆ ಹಾಗೆಯೇ 1980ರಿಂದ ಇಂದಿನವರೆಗೆ ಅಧಿಕಾರದಲ್ಲಿರುವವರು ಇಂದಿರಾಗಾಂಧಿಯವರೇ. ಅಷ್ಟೇ ಅಲ್ಲ, ಆರ್ಥಿಕ ಬಿಕ್ಕಟ್ಟಿನ ಪರಿಹಾರಕ್ಕಾಗಿಯೇ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ರೂ. 5000 ಕೋಟಿ ಸಾಲ ಪಡೆಯಲಾಗಿತ್ತು. ಈ ಕಾರಣದಿಂದಲೇ ದಿಲ್ಲಿಯಲ್ಲಿ ಕ್ರೀಡಾಕೂಟ ನಡೆಸುವ ಸಲುವಾಗಿ (ಏಷಿಯಾಡ್)ಯೂ ತಟಸ್ಥ ರಾಷ್ಟ್ರಗಳ ಸಮಾವೇಶಕ್ಕೂ ನೂರಾರು ಕೋಟಿ ರೂಪಾಯಿ ಖರ್ಚು ಮಾಡಲಾಯಿತು. ಒಂದು ದೇಶ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದರೆ ಇಂಥ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಹೊರಲು ಮುಂದೆ ಬರುವುದು ಅಪರೂಪ. ಅತ್ಯಂತ ವೈಭವದಿಂದ ಈ ಕಾರ್ಯಕ್ರಮಗಳು ನಡೆದು ಹೋದುದರಿಂದ ಇಂದಿರಾಗಾಂಧಿಯ ಹೇಳಿಕೆಗೆ ಪುಷ್ಟಿ ಸಿಗುತ್ತಿಲ್ಲ.

ಹದಿಮೂರು ವರ್ಷಗಳ ಹಿಂದೆ ಅಡಿಗಲ್ಲು ಹಾಕುವಾಗ ವಿದ್ಯುತ್ ಕೊರತೆಯ ನೆನಪು ಬರಲಿಲ್ಲವೇ ಇಂದಿರಾ ಗಾಂಧಿಯವರಿಗೆ ? ಹಾಗಿದ್ದಲ್ಲಿ ಕಾರ್ಖಾನೆ ತಯಾರಾಗುವಷ್ಟೊತ್ತಿಗೆ, ವಿದ್ಯುತ್ ಸಮಸ್ಯೆಯನ್ನು ಪರಿಹರಿಸಿ ವಿಜಯನಗರ ಕಾರ್ಖಾನೆಗೆ ವಿದ್ಯುಚ್ಛಕ್ತಿ ಒದಗಿಸಿಯೇ ತೀರುತ್ತೇವೆಂಬ ದೃಢ ನಿರ್ಧಾರದಿಂದಲೇ ಬಹುಶಃ ಕಾಳೀನದಿ ವಿದ್ಯುಚ್ಛಕ್ತಿ ಯೋಜನೆಗೆ ಕೈಹಾಕಬೇಕಾಗಿತ್ತಲ್ಲ ? ಈಗಿನ ಪರಿಸ್ಥಿತಿಯಲ್ಲಿ ಕೂಡ ವಿಜಯನಗರ ಕಾರ್ಖಾನೆ ಆಗಿಯೇ ತೀರಬೇಕೆಂಬ ದೃಢ ನಿರ್ಧಾರ ಮಾಡಿದ್ದೇ ಆದರೆ ಕಾರ್ಖಾನೆ ತಯಾರಾದಾಗ, ಕಾಳಿಯಿಂದ ಸಾಕಷ್ಟು ವಿದ್ಯುಚ್ಛಕ್ತಿ ಪೂರೈಸಲಿಕ್ಕೆ ಯಾವ ಆತಂಕವೂ ಬರಲಾರದೆಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಇನ್ನು ಕೊನೆಯದಾಗಿ ಅಭಾವ, ನೆರೆಹಾವಳಿ ಕಾರಣಗಳನ್ನು ತೋರಿಸಲಾಗಿದೆ. ಅಭಾವ–ನೆರೆಹಾವಳಿ ಇಂದಿನ ಪ್ರಶ್ನೆಯಲ್ಲವೆಂದು ಇಂದಿರಾ ಗಾಂಧಿಯವರಿಗೆ ಗೊತ್ತಿಲ್ಲವೇ ? ಈ ಎರಡೂ ಸಮಸ್ಯೆಗಳನ್ನು ಜಗತ್ತಿನ ಪ್ರತಿಯೊಂದು ದೇಶಗಳೂ ಪ್ರತಿ ವರ್ಷ ಎದುರಿಸುತ್ತಲೇ ಇವೆ. ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ದೇಶಗಳು ತಮ್ಮ ವಿಜ್ಞಾನ ನೈಪುಣ್ಯತೆಯನ್ನು ವಿನಾಶಕಾರಿ ಶಸ್ತ್ರಾಸ್ತ್ರಗಳ ತಯಾರಿಕೆಗಾಗಿಯೂ, ಸ್ವತಂತ್ರ ದೇಶಗಳನ್ನು ಅತ್ತ ಗುಲಾಮರನ್ನಾಗಿಯೂ ಮಾಡುವ ಸಲುವಾಗಿಯೂ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ದೇಶಗಳೆಗಳನ್ನೆಲ್ಲ ಇದ್ದಂತೆಯೇ ಉಳಿಸಿಕೊಳ್ಳುವ ಸಲುವಾಗಿಯೂ ಉಪಯೋಗಿಸುತ್ತಿವೆ. ಸಮತಾವಾದೀ ದೇಶಗಳು ಅದನ್ನು ನೆರೆಹಾವಳಿ–ಬರಗಳಂತ ಪ್ರಕೃತಿಯ ಪ್ರಕೋಪಗಳನ್ನು ತಡೆಹಿಡಿಯಲಿಕ್ಕೆ ಉಪಯೋಗಿಸುತ್ತಿವೆ ಪ್ರಕೃತಿಯನ್ನು ಸಂಪೂರ್ಣವಾಗಿ ಹಿಡಿತದಲ್ಲಿಟ್ಟುಕೊಳ್ಳುವ ಸಾಧನೆಯಲ್ಲಿ ಸಂಪೂರ್ಣ ಯಶಸ್ವಿಯಾಗದಿರುವುದರಿಂದಲೇ ಅತಿ ಮುಂದುವರಿದ ರಶ್ಯಾ–ಚೀನಾದಂಥ ಸಮತಾವಾದಿ ದೇಶಗಳು ಕೂಡ ಒಂದಲ್ಲೊಂದು ರೀತಿಯಲ್ಲಿ, ಪ್ರಕೃತಿ ಉಂಟುಮಾಡುತ್ತಿರುವ ತೊಂದರೆಗಳನ್ನೆದುರಿಸಲೇಬೇಕಾಗಿದೆ. ಹೀಗಿರುವಾಗ ಭಾರತದಂಥ ದೇಶದ ಪ್ರಗತಿಯನ್ನು ಕಳೆದ 35 ವರ್ಷಗಳಿಂದಲೂ ಕುಂಠಿತಗೊಳಿಸುತ್ತಿರುವ ಕಾಂಗ್ರೆಸ್ ಆಡಳಿತೆಯಲ್ಲಿ ನೆರೆಹಾವಳಿ-ಬರಗಾಲಗಳೆಲ್ಲ ಪ್ರತಿವರ್ಷ ಎದುರಿಸಲೇಬೇಕಾದ ಸಮಸ್ಯೆಗಳಾಗಿವೆ. ಈ ಸಮಸ್ಯೆಗಳಿಗೂ ಮೂಲಭೂತವಾಗಿ ಸ್ಥಾಪನೆಯಾಗಬೇಕಾದಂಥ ಉಕ್ಕಿನ ಕಾರ್ಖಾನೆಗಳಂಥ ಅಭಿವೃದ್ಧಿ ಯೋಜನೆಗಳಿಗೂ ಯಾವುದೇ ಸಂಬಂಧವು ಇಲ್ಲದಿರುವಾಗ ಇಂದಿರಾಗಾಂಧಿಯಂಥವರು ಇವುಗಳ ನೆವ ಹೇಳುವುದರಲ್ಲಿ ಅರ್ಥವಿಲ್ಲವೆಂದೇ ಹೇಳಬೇಕಾಗುತ್ತದೆ.

ಕಾಂಗ್ರೆಸ್ ಮುಖಂಡರಿಗೂ, ಕಾರ್ಯಕರ್ತರಿಗೂ ಒಂದು ನೇರವಾದ ಪ್ರಶ್ನೆ ಕೇಳಬೇಕಾಗಿದೆ. ಇಂದಿರಾ ಗಾಂಧಿಯ ಕುಂಟು ನೆವಗಳಿಗೆ ಮೇಲೆ ವಿವರಿಸಿದ ಉತ್ತರಗಳ ಜೊತೆಯಲ್ಲಿ, ಕೇಂದ್ರದ ಕೈಗಾರಿಕಾ ಮಂತ್ರಿಯಾದ ತಿವಾರಿಯವರು ವಿಜಯನಗರ ಉಕ್ಕಿನ ಕಾರ್ಖಾನೆಯ ಸಲುವಾಗಿಯೇ ಪ್ರತ್ಯೇಕ ಒಂದು ಕಾರ್ಪೊರೇಶನ್ ಸ್ಥಾಪಿಸಿದ್ದನ್ನೂ, ಕರ್ನಾಟಕದವರೇ ಆದ ಕೇಂದ್ರದ ಕೈಗಾರಿಕಾ ರಾಜ್ಯ ಸಚಿವ ಎಸ್. ಎಂ. ಕೃಷ್ಣ ಅವರು ಇತ್ತೀಚೆಗೆ ಈ ಕಾರ್ಖಾನೆ ಸ್ಥಾಪಿಸಲು ವಿದೇಶಗಳ ನೆರವಿಗಾಗಿ ಪ್ರಯತ್ನ ತಡೆದಿದೆಂದು ಹೇಳಿರುವುದನ್ನೂ ಇಂದಿರಾ ಗಾಂಧಿಯ ಅಪಸ್ವರದ ಜೊತೆಯಲ್ಲಿ ಹೇಗೆ ಹೋಲಿಸುತ್ತೀರಿ. ಇದೇ ರೀತಿ ಹಲವು ಮುಖಗಳಿಂದ ಬೇರೆ ಬೇರೆ ಹೇಳಿಕೆಗಳನ್ನು ನೀಡಿಯೇ, ನಿಮ್ಮ ಮುಖಂಡರು ಮೋಸ ಮಾಡುತ್ತಾ ಬಂದಿದ್ದಾರೆಂಬುದನ್ನು ಈಗ ನೀವು ತಿಳಿದುಕೊಳ್ಳುವ ಪರಿಸ್ಥಿತಿಯಲ್ಲಿದ್ದೀರಾ ?

ಕರ್ನಾಟಕದ ಜನತೆಗೆ ಕಾಂಗ್ರೆಸ್ ಆಶ್ವಾಸನೆಗಳ ಅರಿವುಂಟಾಗಿಯೇ ಆ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಿದ್ದಾರೆ. ಈ ಕಾರಣಕ್ಕಾಗಿಯೇ ಇಂದಿರಾ ಗಾಂಧಿ ತನ್ನ ಮನದೊಳಗಿದ್ದ ಗುಟ್ಟನ್ನು ಬಿಚ್ಚಿ ತೋರಿಸಿದ್ದಾರೆ. ಎಸ್. ಎಂ. ಕೃಷ್ಣ ಅಥವಾ ಬೇರೆ ಮುಖಂಡನಾಗಲೀ, ಕಾರ್ಯಕರ್ತನಾಗಲೀ ಇಂದಿರಾ ಗಾಂಧಿಯ ಹೇಳಿಕೆಯನ್ನು ಪ್ರತಿಭಟಿಸುವ ಧೈರ್ಯ ತೋರಿಸಲಿಲ್ಲ. ಹೆಗಡೆ ಸರಕಾರದ ವಿರುದ್ಧ ದಿನ ನಿತ್ಯ ಹೇಳಿಕೆ ನೀಡುವ ವೀರಪ್ಪ ಮೊಯಿಲಿಯವರಿಗೆ ಪಾಪ ! ಇಂದಿರಾ ಗಾಂಧಿಯ ಹೇಳಿಕೆಯ ಅರ್ಥ ತಿಳಿದಂತೆ ಕಂಡು ಬರುತ್ತಿಲ್ಲ.

ಕರ್ನಾಟಕದಲ್ಲಿ ಜನತಾ ಪಕ್ಷದ ಹೆಗಡೆ ಸರಕಾರವಿದೆ. ರಾಮಕೃಷ್ಣ ಹೆಗಡೆಯವರು ವಿಜಯನಗರ ಉಕ್ಕಿನ ಕಾರ್ಖಾನೆ ಪಡೆಯುವುದು ನಮ್ಮ ಹಕ್ಕು. ಅದು ಆಗಲೇ ಬೇಕೆಂದು ಸಾರಿದ್ದಾರೆ. ಪೌರುಷದ ಮಾತುಗಳು ಬೇಡ. ಕೃತಿಬೇಕು. ಇಂದಿರಾ ಗಾಂಧಿಯ ಆಹ್ವಾನವನ್ನು ಸ್ವೀಕರಿಸಲು ರಾಜ್ಯ ಸರಕಾರ ಮತ್ತು ಜನತಾ ಪಕ್ಷ ತಯಾರಿದೆಯೇ ? ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ, ಭಾರತ ಕಮ್ಯೂನಿಸ್ಟ್ ಪಾರ್ಟಿಗಳು ತಯಾರಿವೆ. ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಹೋರಾಟ ನಡೆಯಲೇಬೇಕು. ಇದರ ಮುಖಂಡತ್ವವನ್ನು ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ವಹಿಸುತ್ತಾರೆಯೇ? ಅವರು ವಹಿಸಲೇಬೇಕು. ಈ ಜವಾಬ್ದಾರಿ ಹೊರಲು ಅವರು ತಯಾರಾಗದಿದ್ದರೆ ನಾವು ಮತ್ತು ಕರ್ನಾಟಕದ ಜನತೆ ನಡೆಸುವ ಹೋರಾಟದಲ್ಲಿ ಅವರೆಲ್ಲ ಪಾಲ್ಗೊಳ್ಳಬೇಕು. ಯಾವದೇ ರೀತಿಯ ಆತಂಕ ಒಡ್ಡಬಾರದು. ವಿಶಾಲ ರೀತಿಯ ಬಲಿಷ್ಟ ಹೋರಾಟಕ್ಕೆ ತಯಾರಾಗೋಣ. ವಿಜಯನಗರ ಉಕ್ಕಿನ ಕಾರ್ಖಾನೆ ಪಡೆಯೋಣ.

— ಎನ್. ಕೆ. ಉಪಾಧ್ಯಾಯ

ನಗರಸಭೆ, ಪುರಸಭೆ ಚುನಾವಣೆ

ಸಿ. ಪಿ. ಐ. (ಎಂ) ಸ್ಪರ್ಧೆ

ಬೆಂಗಳೂರು ನಗರ ಸಭೆ

1.	ಕಾ. ಆರ್. ಶ್ರೀನಿವಾಸ್	ಪಾದರಾಯನಪುರ ವಿಭಾಗ
2.	ಕಾ. ಪಿ. ಕೆ. ಸುಬ್ರಮಣಿ	ಪ್ರಕಾಶನಗರ ವಿಭಾಗ
3.	ಕಾ. ಕೃಷ್ಣವೇಣಿ	ರಾಮಚಂದ್ರಪುರ ವಿಭಾಗ
4.	ಕಾ. ರಾಮಯ್ಯ	ಲಕ್ಕಸಂದ್ರ ವಿಭಾಗ

ಮೈಸೂರು ನಗರ ಸಭೆ

1.	ಮೋಹನ್ ಕುಮಾರ್	ಡಿವಿಜನ್	13
2.	ಮುತ್ತು	„	5 (ಮೀಸಲು)
3.	ಮಾರ	„	6 (ಮೀಸಲು)
4.	ಇಸ್ಮಾಯಿಲ್	„	43
5.	ಮಂಜುನಾಥಸ್ವಾಮಿ	„	48 (ಮೀಸಲು)

ಹುಬ್ಬಳ್ಳಿ– ಧಾರವಾಡ ನಗರಸಭೆ

ನಾಲ್ಕು ಮಂದಿ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಅಲ್ಲದೆ ಈ ಕೆಳಕಂಡ ಪುರಸಭಾ ಚುನಾವಣೆಗಳಲ್ಲಿ ನಮ್ಮ ಪಕ್ಷ ಸ್ಪರ್ಧಿಸುತ್ತಿದೆ. ಬಿಜಾಪುರ, ಬೀದರ್, ಶಹಾಪುರ, ಸುರಪುರ, ರಾಯಚೂರು, ಸಿಂಧನೂರು, ಗಂಗಾವತಿ, ಸಿರಾ, ಕುಣಿಗಲ್, ತುಮಕೂರು, ಕೆ.ಜಿ.ಎಫ್. ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಶಿವಮೊಗ್ಗ, ಭದ್ರಾವತಿ, ರಾಣೇಬೆನ್ನೂರು, ದೊಡ್ಡಬಳ್ಳಾಪುರ.

ಬಿಜೆಪಿಯಲ್ಲಿ ಒಡಕು

(1ನೇ ಪುಟದಿಂದ)

ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಕೊನೆಗಾದರೂ ತಮ್ಮ ಅಸ್ತಿತ್ವವನ್ನೇ ಪ್ರಶ್ನಿಸಲು ಆರ್.ಎಸ್.ಎಸ್. ನವರು ಹೊರಟಾಗ, ತಮ್ಮನ್ನು ಎಲ್ಲಾ ಸ್ಥಾನಮಾನಗಳಿಂದ ಪಿತೂರಿ ಮಾಡಿ ಹೊರಹಾಕಲು ಹೊರಟಾಗ, ತಮ್ಮನ್ನು 'ರಾಜಕೀಯ' ದಿಂದ ಇತಿಶ್ರೀ ಮಾಡಲು ಹೊರಟಾಗ,....ಮಾತ್ರ ಶ್ರೀ ಸುಬ್ಬಯ್ಯನವರು ಕಣ್ಣು ತೆರೆದುದು.... ಕಣ್ಣು ತೆರೆದು ತಮ್ಮ ವೈರಿಗಳ 'ಮುಖವಾಡ' ವನ್ನೇ ಹರಿದು ಹಾಕಿದುದು ನಿಜಕ್ಕೂ ಶ್ಲಾಘನೀಯ ಮತ್ತು ಅತ್ಯಂತ ಸ್ವಾಗತಾರ್ಹವಾದ ಘಟನೆ.

ಯಾವ ವಿಷಯವಾಗಲೀ ಶ್ರೀಮಾನ್ ಎ. ಕೆ. ಸುಬ್ಬಯ್ಯನವರೊಡನೆ ಯಾವುದೇ ಭಿನ್ನಾಭಿಪ್ರಾಯವಿದ್ದಾಗ್ಯೂ, ಅವರು ಮಾಡಿದ ಈ ಮಹಾಕಾರ್ಯ ನಿಜಕ್ಕೂ ಬಹಳ ಮಹತ್ವವುಳ್ಳದ್ದು.

1948–49ರಲ್ಲಿ 'ಜನ ಸಂಘ' ಹುಟ್ಟಿದಾಗ ಎಷ್ಟೊಂದು ಅಲ್ಪಪ್ರಮಾಣದಲ್ಲಿ ಈ ವಿಷ ಬೀಜ ಆರ್.ಎಸ್.ಎಸ್. ಎಂಬ ಹೊಸ ರಾಜಕೀಯ ಮುಖವಾಡವನ್ನು ತಾಳಿ ಜನತೆಯ ಮಧ್ಯೆ ಬಂದರೂ, ಕ್ರಮೇಣ ಆ ಬೀಜ ಹೇಗೆ 'ಹೆಮ್ಮರ' ವಾಗಿ ಬೆಳೆದು ದೇಶದ ಐಕ್ಯತೆಗೇನೇ ಕೊಡಲಿ ಏಟು ಹಾಕುತ್ತಾ ಬಂದಿತು ಎಂಬುದನ್ನು ಸ್ಮರಿಸಿದರೆ.... ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಎದುರಿಸಿದ ಶಕ್ತಿ ಎಷ್ಟು ಗಂಡಾಂತರಕಾರಿ ಎಂಬುದರ ಅರಿವಾಗಬಹುದು.

ದೇಶದ ರಾಜಕೀಯದಲ್ಲಿ ಆಸೇತು ಹಿಮಾಚಲ ಪರ್ಯಂತ ಆರ್.ಎಸ್.ಎಸ್.ನ ಸಂಕುಚಿತ ಆದರೆ ಅತ್ಯಂತ ಅಪಾಯಕಾರೀ (ಬಹು ಮತೀಯ ಜಾತೀಯತೆ) ಜಾತೀಯತೆಯನ್ನು ಖಡಾಖಂಡಿತವಾಗಿ ಎದುರಿಸುತ್ತಾ, ಅದರ ಧಾಳಿಗೆ, ಅದರ ಛೀಮಾರಿಗೆ ಒಳಗಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟರಿಗೆ ಇದು ಹೊಸತಲ್ಲವಾದರೂ.... ಈ ಸನ್ನಿವೇಶ ಸ್ವಾಗತಾರ್ಹ.

ಶ್ರೀಮಾನ್ ಎ. ಕೆ. ಸುಬ್ಬಯ್ಯನವರ ಆರ್.ಎಸ್.ಎಸ್. ರಾಜಕೀಯ ವಿರುದ್ಧದ ಹೋರಾಟವು ಯಶಸ್ವಿಯಾಗಲಿ ಎಂದಿಷ್ಟೇ ನಾವಿಲ್ಲಿ ಈ ಸಂದರ್ಭದಲ್ಲಿ ಹೇಳಬಯಸುತ್ತೇವೆ.

ಕರ್ನಾಟಕದ ರಾಜಕೀಯದಲ್ಲಿ ಆರ್.ಎಸ್.ಎಸ್.ನ ಜಾತೀಯ ರಾಜಕೀಯಕ್ಕೆ ಭವಿಷ್ಯತ್ತಿಲ್ಲ. ಎಂಬುದು ಈ ಹೋರಾಟದ ಫಲವಾಗಿ ಬರಲಿ ಎಂದು ನಾವು ಹಾರೈಸುತ್ತೇವೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 241
Printed at Karnataka Pressmen Associates (P) Limited, 54/1, K R. Road, Bangalore-4 Editor: P. RAMACHANDRARAO